"Service of the Poor is the Se[illegible] of God".

JANUARY [illegible] ISSUE

ಓಂ

BADAVARA BANDHU

ಬಡವರಬಂಧು

EDITOR:—MANGALORE JARAPPA. ASSOCIATE EDITOR:—B. NARSAPPA.

A HIGH CLASS RUPEE-MAGAZINE TO SUIT ALL INTERESTS.

ವಾರ್ಷಿಕ ಚಂದಾ ಒಂದು ರೂಪಾಯಿ ಮಾತ್ರ!!! ಅಂಚೆವೆಚ್ಚ ನಾಲ್ಕಾಣೆ.

ಭಿನ್ನರುಚಿಗೊಪ್ಪುವ ಕನ್ನಡ ಮಾಸಪತ್ರಿಕೆ. ಜನವರಿ ಸ್ಮರಣಾರ್ಥವಾಗಿ ಇದಕ್ಕೆ ೧ ಆಣೆ ಬೆಲೆ ಇಡಲಾಗಿದೆ. [ಬಿಡಿ ಸಂಚಿಕೆ ಆಣೆ ೦—೧—೦.

"ಬಡವರ ಬಂಧು"ವಿನಲ್ಲಿ ಉಚ್ಚ ತರಗತಿಯ ಸಣ್ಣ ಕಥೆಗಳೂ, ಪದ್ಯಗಳೂ, ಧಾರ್ಮಿಕ ನೈತಿಕ ವಿಚಾರಗಳನ್ನೊಳಗೊಂಡ ಲೇಖಗಳೂ ಬರುವುವು. ಪತ್ರವ್ಯವಹಾರ, ಹಾಸ್ಯ, ವಿಮರ್ಶೆ, ಒಗಟು, "ಟಿಟ್‌ಬಿಟ್ಸ್," ಒಳದೇಶವಿದೇಶ ವಾರ್ತೆಗಳೂ ಕೊಡಲ್ಪಡುವುವು.
ಇಂತಹ ಅಮೂಲ್ಯ ಮತ್ತು ಅತೀ ಅಗ್ಗವಾದ ಮಾಸಿಕಪತ್ರಿಕೆಯನ್ನು

"ಬಡವರಬಂಧು" ಕಾರ್ಯಾಲಯ, ಹಂಪನಕಟ್ಟೆ, ಮಂಗಳೂರು, ಇಲ್ಲಿಂದ ತರಿಸಿಕೊಳ್ಳಿರಿ.

ಸಂಪುಟ ೧.	ತಾರೀಕು ೧ನೇ ಜನವರಿ ೧೯೩೩.	ಸಂಚಿಕೆ ೯

[illegible]ನು.

[illegible] ನನಗಿರಲಿ, ನಿನ್ನ ಕಾಡುವುದೇಕೆ?
ನೀನರಿಯದೊಂದುಂಟೆ? ನಾನೊರೆವುದಿನ್ನುಂಟೆ? ॥ ಪಲ್ಲ ॥

1. ನನ್ನ ಕಣ್ಣೀರಿಂದ ನಿನ್ನ ಕಾಲ್ತೊಳೆವೆನೇ?
ನನ್ನ ದುಃಖದ ಮೂಟೆ ನಿನ್ನ ಬಳಿಗೊಯ್ವೆನೇ?
ನನ್ನ ಚಿಂತೆಯ ಚಿಂದಿಯನ್ನು ನಾ ತೊರೆವೆನೇ?
ನನ್ನಳಲ ಸಂಪದವ ನಾನುಳಿದು ಮೆರೆವೆನೇ?
ನನ್ನ ನಿಟ್ಟುಸಿರಿಂದ ನಿನ್ನ ನೋಯಿಸುವೆನೇ?
ಅನ್ನ ದೊರೆತಿಲ್ಲೆಂದು ನಿನ್ನ ಬೇಯಿಸುವೆನೇ?

2. ನೀ ನಡೆಯುತಿರು ಮುಂದೆ, ನಾನಡಿಯಿಡುವೆ ಹಿಂದೆ;
ನೀನಡಗಿಯೋಡಿದರೆ, ನಾ ನಡುಗಿ ಬೆದರುವೆನೆ?
ನೀನಗಲಿ ಪೀಡಿಸಲು, ನಾ ನಗುತ ಕಾಲಿಡುವೆ;
ನೀನಳಿಸಲೆತ್ನಿಸಲು, ನಾನಲಿದು ನಡೆವೆ;
[illegible]ನಿರುವವಧಿಯೆನಗೆ, ದೀನತೆಯ ಭಯವುಂಟೆ?
ನಾನಿರುವವಧಿ ನೀನು, ನನ್ನನಗಲುವುದುಂಟೆ?

3. ನಾನರಿತಿರುವೆ, ನೀನು ನನ್ನ ಬಿಟ್ಟರೆ ಇಲ್ಲ,
ನಿನ್ನ ಕರೆವವರಾರು, ನಾನಿಲ್ಲದಿಲ್ಲ,
ನಿನ್ನದೀ ಸಂಸಾರ, ನಿನ್ನೊಳಿಗವು ನನಗೆ,
ನನ್ನೊಳಿಗದ ಸಿದ್ಧಿ ನಿನ್ನ ಯಜಮಾನಿಕೆಗೆ.
ನನ್ನವರು ನನ್ನನರಿಯುವ ಮುನ್ನ ಬಲ್ಲವನು,
ನಿನ್ನ ಬಲ್ಲವ ನಿನ್ನ ಮಾಯುಗಳನರಿಯನೆ?

ಎಂ. ಎನ್. ಕಾಮತ್.

Never vaunt your gifts to the poor or expect
their gratitude, but rather be grateful to them
for giving you the occasion of practising
charity on them.

Swami Vivekananda.

X'MAS TIME!

ಇದೋ ಇತ್ತ ನೋಡಿ! ಇದೋ ಇತ್ತ ನೋಡಿ!

ಎಂ. ಎಸ್. ನಾಯಕ್ ಎಂಡ್ ಎಂ. ಚೆಂದಪ್ಪ,

ಟೈಲರ್ಸ್. ರಥಬೀದಿ, ಮಂಗಳೂರು.



ಅತ್ಯುತ್ತಮವಾದ ಬೇಬಿ ಫ್ರೋಕ್. ಲೇಡಿ ಗವನ್. ಜಂಪರ್ಸ್, ಸೈಲರ್ ಸೂಟ್, ಸಿಮಿಸ್, ಬೋಡಿಸ್, ಪೆಟ್ಟಿಕೋಟ್, ತೊಟ್ಟಲಿನ ತಟ್ಟೆ ಅದಕ್ಕೆ ಬೇಕಾದ ಇನ್ನಿತರ ಗಿಳಿ ವಗ್ಯೆರೆ ಎಲ್ಲಾ ತರದ ಉಡುಗೆತೊಡಿಗೆಗಳು ನಮ್ಮಲ್ಲಿ ರೆಡಿಮೇಡ್ ಇದೆ. ವಿನಹಾ ಒರ್ಡರು ಪ್ರಕಾರ ಅವುಗಳನ್ನು ಹೊಲಿದು ಕೊಡಲೂಬಹುದು.

ತರಬೇತಿಯುಳ್ಳ ಹೊಲಿಗೆಗಾರರು! ಅತ್ತಿತ್ತ ಹೋಗಬೇಡಿ!

ಎಮ್. ಗಣಪಯ್ಯ ಎಂಡ್ ಸನ್ಸ್,

ರಥಬೀದಿ, ಮಂಗಳೂರು, ದ. ಕ.

56 ವರ್ಷಗಳ ಉತ್ತಮ ಅನುಭವಸಿದ್ಧ ಔಷಧಗಳು. ಕೆಳಗಿನದಲ್ಲದೆ ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲೆ ಸಂಗತಿ ವಿವರವಾಗಿ ಬರೆದಲಿ ರೋಗಕ್ಕೆ ತಕ್ಕನಾದ ಔಷಧಿ ರವಾನಿಸಬಹುದು.

ಧಾತುಪುಷ್ಟಿ ಲೇಹ.

ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ...ಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರ... ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾ... ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇ... ...ತ್ತದ ಬಾಧೆ, ಒಳಜ್ವರ, ಮಲಮದ್ಧತೆ, ಮೊದಲಾದವುಗಳು ಪೂರ್ಣ ಗುಣವಾಗಿ ದೇಹಕ್ಕೆ ಕಾಂತಿಯನ್ನೂ, ಚೇತನವನ್ನೂ ಕೊಡುವ ನವಶಕ್ತಿಯ ಲೇಹ.

ಕ್ರಯ ಡಬ್ಬಿ 1ಕ್ಕೆ 2–8–0. 3 ಡಬ್ಬಿಗಳಿಗೆ 7–0–0.

ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳಿತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಅತಿ ಶೀಘ್ರದಲ್ಲಿಯೇ ಗುಣಪಡಿಸುವುದು. ಕ್ರಯ ಒಂದು ಬಾಟ್ಲಿ ಔಷಧಕ್ಕೆ ರೂ. 1–4–0.

ಒಂದು ಡಬ್ಬಿ ಮಾತ್ರೆಗೆ ರೂ. 1–0–0.

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6–4–0.

ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ

ಬಾಳಂತಿಯರಿಗೂ, ಕೂಸುಗಳಿಗೂ ಇದರಂತಹ ಇನ್ನೊಂದು ಔಷಧ ಇಲ್ಲ. ಪ್ರಸವಾಯಾಸ ಬಾಳಂತಿ ಕುತ್ತು ಮೊದಲಾದುವುಗಳನ್ನು ಹೋಗಲಾಡಿಸಿ; ಬಾಳಂತಿಯರು ಹಿಂದಿನ ನವಯೌವನವನ್ನು ಹೊಂದುವರು. ಕೂಸುಗಳು ಹೃಷ್ಟಪುಷ್ಟರಾಗಿ ಬೆಳೆದು ಆನಂದಾಯಕರಾಗುವ ಹಾಗೂ ಮಾಡುವ ಸುಪ್ರಸಿದ್ಧ ಔಷಧ.

ಬಾಟ್ಲಿ 1ರ ರೂ. 1–8–0.

ಎರಡು ಬಾಟ್ಲಿಗಳಿಗೆ ರೂ. 3–0–0.

ಮಲೇರಿಯಾ ನಿವಾರಿಣಿ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಜಾ, ನಿಮೋನಿಯಾ, ಒಂದು ದಿನ ಯಾ ಎರಡು ದಿನ ಬಿಟ್ಟು ಬರುವ ಜ್ವರ ಚಾತುರ್ಥಿಕ ಜ್ವರ, ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳು ಹೋಗಲಾಡಿಸಲ್ಪಟ್ಟು ಸಂಪೂರ್ಣ ಆರೋಗ್ಯವು ಲಭಿಸುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 1–8–0.

ಮೂರು ಬಾಟ್ಲಿಗಳಿಗೆ ಕ್ರಯ ರೂ. 4–2–0.

ಮಾಹಿತಿ ಬಗ್ಗೆ ಕೆಟಲಾಗಿಗೆ ಬರೆದು ತರಿಸಿಕೊಳ್ಳಿರಿ.

“ಬಡವರ ಸೇವೆಯೇ ಭಗವಂ[illegible]ವೆ.”

God will rule the lives of all those who will surrender themselves without reservation to Him.
Gandhiji.

ESTABLISHED 19[illegible]

“ಬಡವರ ಬಂಧು”

We must have faith in our Truth and Love for converting our opponents to our way.
Gandhiji.

ಸಂಪುಟ ೧೦. | ತಾರೀಕು ೧ನೇ ಜನವರಿ ೧೯೩೩. | ಸಂಚಿಕೆ ೯.

ನನ್ನ ಗಾಂಧಿ.

ಸುಕ್ಕಿಹುದು
ನಿನ್ನ ಮೊಗ
ಸಿಲುಕಿರುವೆ ಸಿಕ್ಕಿನಲಿ
ಸಿಕ್ಕಕಡಿ
ದಿಕ್ಕುವಾ
ಸೊಕ್ಕಿಹುದು ಸಿಕ್ಕಿನಲಿ!

ಬಡತನದ
ಮಾರಿಯನು
ಪಿಡಿ ತಂದು ಚರಕದಲಿ
ನಡು ಮುರಿದು
ಅಟ್ಟುತಿಹೆ
ಕಡಲಾಚೆ ಎಡೆಗಳಿಗೆ!

ಒಡಲ ಬಾ
ಡಿಸಿತು ದಿಟ
[illegible]ವಿಯ ಕಾಟ
ಚಲುದೇಹ
ಎಲುಬಾಗೆ
ಜಗ ನೋಡೀತೀಯಾಟ!

ಎದೆಗೂಡು
ಕಾಣುತಲಿ
ಜಗದೊಲವನುಕ್ಕಿಸಿತು
ಕರುಣದಾ
ಕ್ರಾಂತಿಯುದು
ಅರಿಕೆರುಳ ಕಕ್ಕಿಸಿತು!

ಭಾರತರು
ಬ್ರಿಟಿಷರು
ಎಂದೆಣಿಸದಿರಿ ಭೇದ
ಮನುಜಮನು
ಜರನುಜರು
ಎಂದರಿವುದದೆ ವೇದ

“ಹೋರದಿಂ
ನಾಕವನು
ನಾನಿಲ್ಲಿ ನಿರ್ಮಿಸುವೆ”
ಎಂದೊರೆದು
ಜಗ ಬಿಗಿಯ
ಲೊಲುಮೆಯುಲೆಳಸುತಿರುವೆ!

ಸೆರೆ ಶಾಲೆ
ಸರಳುಗಳು
ಉಕ್ಕಿನಾ ಕವಚಗಳು
ನಿಜಕರ್ಮ
ಮೂಸೆಯಲಿ
ನಡುಗಿದುವು-ಕರಗಿದುವು!

ಏಸುದಣಿ
ದೇಸುಮಣಿ
ದೇಸು ನೀ ಬಳಲಿದೆಯೊ?
ಜಗದಳಲು
ಜಗದೊಲವು
ಏಸಿಹುದೋ ಎದೆಯೊಳಗೆ?

ಸಿಕ್ಕುಗಳ
ನಕ್ಕುಬಿಡಿ
ಸುತಲಿರುವೆ ನೀ ತಂದೆ;
ಸೊಕ್ಕುಗಳ
ನಕ್ಕು ನೀ
ಕಕ್ಕಿಸುವೆ ನಿಜದಿಂದೆ!

ಭಾರತದ
ಭಾನುಮಣಿ
ಓಡಿಸೈ ಜಗದಿರುಳ!
ಭಾರತದ
ತನುವಾಣಿ
ಕೂಡಿಸೈ ಜಗದೊಲವ!

ನೀಲ-

ಚುಕ್ಕಿ ಮಿನುಗುತ್ತಿದೆ.

ಏನಿದು ಗುಟ್ಟು ! ಮಿರುಗಿನ ಕದ ತೆರೆದೊಮ್ಮೊಮ್ಮೆ;
ತನುವಿನ ಪ್ರಭೆ ತೋರಿಸುತೊಮ್ಮೊಮ್ಮೆ,
ಮುಚ್ಚುತ ತೆರೆಯುತ, ತೆರೆಯುತ ಮುಚ್ಚುತ
ನೃತ್ಯವ ಮಾಡುತ ಬೆಡಗನು ಬೀರುತ
ನಿತ್ಯಾಕಾಶದಿ ಅಲಸದೆ ನಲಿಯುತ
ಚುಕ್ಕಿ ಮಿನುಗುತ್ತಿದೆ ! ನೋಡಿದೆಯಾ !
ಈ ನಲವಿಷ್ಟೇ ! ನೆಲದಗಲದ ದೇಹಿಗಳಿಷ್ಟೆಷ್ಟೊ !
ಅರಸರು, ಧನಿಗಳು ಆಳುಗಳೆಷ್ಟೊ !
ಹುಟ್ಟುತ ಸಾಯುತ, ಸಾಯುತ ಹುಟ್ಟುತ
ಹುಟ್ಟಿಯು ಹುಟ್ಟದ ಸತ್ತೂ ಸಾಯದ
ಸೃಷ್ಟಿಯು ಮೊದಲಿಂದೆಲ್ಲವ ನೋಡಿದ
ಚುಕ್ಕಿ ನಗುತಲ್ಲಿದೆ ನೋಡಿದೆಯಾ !
ಈ ನಗುವಿಷ್ಟೇ ! [illegible] ವಿನರಿತರಿತೂ,
ಕೆಲಕಿಹ ಬಡ [illegible]ತು [illegible]
ಕಳೆದುದ ನೆ[illegible]ತ್ತಿ[illegible] ತಿಳಿಯದ
ಪಡೆಯಲದೇ [illegible]ರಿಯದ
ಮುದಮಾದ[illegible]ಡದರೆ ಸೆ[illegible]
ಚುಕ್ಕಿ ಅ[illegible]ಲಿದೆ ! ನೋ[illegible]
ಈ ಅಳುವಿಷ್ಟೇ ಬಡ[illegible]ನ ಸೊಗವುಣ್ಣುವರಿಲ್ಲಿಲ್ಲ !
ಜೀವನವನದಲಿ ತೇ[illegible]ುವರಲ್ಲ,
ಹೊಟ್ಟೆಗೆ ಬಳಲಿ[illegible] ಸಾವಿಗೆ ಹೆದರುತ,
ಮನಮರುಗುತ[illegible]ಷ್ಟಿಯನರಿಯದ
ಮಾನವ ಕೋಟಿಯ ಅನುದಿನ ನೋಡಿದ
ಚುಕ್ಕಿ ಹಳಿಯುತಿದೆ! ನೋಡಿದೆಯಾ!
ಈ ಗುಟ್ಟಿಷ್ಟೇ ! ಮಿನುಗುವುದೊಮ್ಮೆ ನಗುವುದೊಮ್ಮೊಮ್ಮೆ,
ಅಳುವುದು, ಹಳಿವುದು, ನಲಿವುದಿದೊಮ್ಮೆ,
ಕೆಲವರು ಮಿನುಗನು ಕೆಲವರು ನಗುವನು
ಕೆಲಕೆಲರಳುವನು ಹಳಿವನು ಕಾಂಬುದು,
ಒಳಗನು ಹೊರ ಕಾಂಬುದು ಸಹಜವಿದು,
ಚುಕ್ಕಿ ಮಿನುಗುತಿದೆ ! ನೋಡಿದೆಯಾ !

ಪದ್ಮನಾಭ, ಮಿತ್ರಮಂಡಳಿ.

ಹೊಸ ವರ್ಷದ ಹೊಸ ಮಾತು.

ಸಂಪಾದಕೀಯ.

1932 ಹೋಯಿತು! 1933 ಬಂತು! "ಬಡವರ ಬಂಧು"ವಿಗೆ ಈ 9ನೇ ಸಂಚಿಕೆಯ ಪ್ರಕಟಣೆಯೊಡನೆ ಎಂಟು ಮಾಸಗಳು ತುಂಬಿದುವು.

ನಾವು ನಮ್ಮ ಪ್ರಥಮ ಸಂಚಿಕೆಯಲ್ಲಿ ತೋರಿದ ಆಶಾವಾದವನ್ನು ಈ . ಸಂಚಿಕೆಯಲ್ಲೂ ಕಾಯ್ದುಕೊಳ್ಳುವಂತಹ ಸಮಾಧಾನಪೂರ್ವಕ ಪ್ರಗತಿಯು ನಮ್ಮ ಹಸುಗೂಸಿದ್ದಾಗಿರುತ್ತದೆ. ಅದಕ್ಕಾಗಿ ನಾವು ಅತ್ಯಂತ ಆನಂದಗೊಂಡಿದ್ದೇವೆ-ಹೊಸ ವರ್ಷದ ಈ ದಿನದಲ್ಲಿ ನಮ್ಮ ಸಮಸ್ತ ವಾಚಕ, ಪ್ರೇರಕ, ಪೋಷಕವೃಂದದಿಂದ ಮಗುವಿಗೆ ಆಶೀರ್ವಾದವನ್ನು ಹಾರೈಸುತ್ತೇವೆ.

1932ರ ನಮ್ಮ ಕರ್ಣಾಟಕ ಸೇವೆಯು ಸಾಕಷ್ಟಾಗಲಿಲ್ಲವೆಂದು ನಮ್ಮ ವಾಚಕರಿಗೆ ತಿಳಿದಿರುವಂತೆ ನಮಗೂ ಅದರ ಅರಿವಿದೆ. ಇದಕ್ಕಾಗಿ ಚಿಂತಿಸಿ ಫಲವಿಲ್ಲ-ಚಿಂತಿಸ ಕಾರಣವೂ ಇಲ್ಲ. ಸಾಧನೆಯ ದೀಪವೊಂದಿದ್ದರೆ 'ಕಾಲ'ನ ಗನಿಯಿಂದ ಭಂಗಾರವು ದೊರೆಯದಿರದೆಂದು ನಾವು ನಂಬಿದ್ದೇವೆ-

"ಪುಟಗಳನ್ನು ಹೆಚ್ಚಿಸಬಹುದಲ್ಲವೇ?" ಎಂದು ಒಂದು ಸೂಚನೆ. ಇದು ತಪ್ಪಲ್ಲ, ಸರಿ. ಆದರೆ ಹೆತ್ತವರ ಅನುಕೂಲತೆಯನು ಸಾರವಾಗಿಯಲ್ಲವೇ ಮಕ್ಕಳನ್ನು ಪರಿಪೋಷಿಸುವುದು? ಮಗು ಹುಟ್ಟಿದ ಸಂತೋಷದಿಂದ ಶಕ್ತಿಮೀರಿ ಸಹಸ್ರ ಭೋಜನ ಮಾಡಿಸಿದರೆ ಮೇರೆ ಮೀರಿದ ವೆಚ್ಚದ, ಅಂದರೆ ಸಾಲಸೋಲಗಳ ಹೊರೆಯಿಂದ ಮುಂದಕ್ಕೆ ಮಗುವಿಗೆ ತೊಡುವ ತುಂಡು ವಸ್ತ್ರವೂ ಇಲ್ಲದಂತಾದರೆ? ಹೀಗಾಗಿ ನಾವು ನಮ್ಮ "ಬಡವರ ಬಂಧು"ವಿನ ಭಾವೀ ಪ್ರಗತಿಯ ಸಮತುಲನೆಯ ನಂತರವೇ ಹೆಚ್ಚಿನ ಪುಟಗಳ ಸುಂದರ ಉಡುಪನ್ನು ಅದಕ್ಕೆ ಹಾಕಬೇಕೆಂದಿದ್ದೇವೆ. ಅಷ್ಟರ ತನಕ ಅದರ ವಾಚಕ, ಪಾಲಕ, ಪ್ರೇರಕರು ತಾಳ್ಮೆಯನ್ನು ಸಹಿಸಿ, ತಪ್ಪು ತಡೆಗಳಿದ್ದರೆ ಮನ್ನಿಸಿ, ತಮ್ಮ ಕೊಡುಗೈದಾನವನ್ನು ಮುಂದರಿಸುವರೆಂದೇ ನಂಬುವವರಿದ್ದೇವೆ.

ನಾವೇನೋ ನಮ್ಮವರಿಗೆ ಹೊಸ ವರ್ಷದ ಉಡುಗೊರೆಗಳನ್ನು ಈ ಸಲದ ದಪ್ಪ ರಕ್ಷಾಪತ್ರ (Bind)ದ ರೂಪದಿಂದ ಅರ್ಪಿಸಿದ್ದೇವೆ. ಒಂದೆರಡು ಚಿತ್ರಗಳ ರೂಪದಲ್ಲಿಯೂ ಕೊಟ್ಟಿರುತ್ತೇವೆ. ಅನುಕೂಲಿಸಿದರೆ, ಮುಂದಕ್ಕೂ ಕೊಡಲಿದ್ದೇವೆ-ನಮ್ಮ ವಾಚಕರನ್ನು ಹೇಗಾದರೂ ಸಮಾಧಾನಗೊಳಿಸಲೇ ಬೇಕೆಂದಿದ್ದೇವೆ. ಅದರೆ "ಬಡವರ ಬಂಧು"ವಿಗೆ ನಮ್ಮವರು ಹೊಸ ವರ್ಷದ ಕಾಣಿಕೆಯಾಗಿ ಏನನ್ನೆಲ್ಲ ಕಳುಹಿಸಲಿರುವರೋ ನಾವರಿಯೆವು. ಕೆಲವರು ತಂತಮ್ಮ ಉಡುಗೊರೆಗಳನ್ನು ಈಗಾಗಲೇ ಕಳುಹಿಸಿ ನಮ್ಮನ್ನು ಸಂತೋಷಗೊಳಿಸಿರುವರು. ಅವರಂತೆ, ಮಿಕ್ಕುಳಿದವರೂ ಈ ನಮ್ಮ ಬರಹ ಮೂಲಕ ವಿಜ್ಞಾಪನೆಗೆ ದಯಾಭಾವದ ಮನ್ನಣೆಗೊಟ್ಟು 'ಬಡವರ ಬಂಧು'ವಿಗೆ, ಒಬ್ಬರಿಗೆ ಇಬ್ಬರಂತೆ ಹೊಸ ಚಂದಾದಾರರನ್ನೂ, ಒಂದಕ್ಕೆ ಎರಡರಂತೆ ಉತ್ತಮ ಲೇಖನಗಳನ್ನೂ, ಒಂದಂಗಡಿಗೆ ಎರಡರಂತೆ ಜಾಹೀರಾತುಗಳನ್ನೂ ಒದಗಿಸಿ ಕೊಡಲಿ; ಅಂದರೆ, ೧೯೩೩ರ ನಮ್ಮ ಸಾಧನೆಯ ದೀಪವು ಶುಭ್ರವಾಗಿ ಬೆಳಗಿ, ಮಾರ್ಗವು ಸುಗಮವಾಗುವುದರಲ್ಲಿ ಸಂದೇಹವಿರದು.

೧೯೩೩ರಲ್ಲಿ ನಮ್ಮ ಲೇಖನಿಯನ್ನು ಕೆಳಗಿಡುವ ಮೊದಲು-ಸಾಹಿತ್ಯದಲ್ಲಿ ಬೆಳಗುತ್ತಿರುವ ಕನ್ನಡ ಮಾತೆಯು ಉಜ್ವಲವಾಗಿ ಬೆಳಗಲಿ, ಕನ್ನಡ ಸಾಹಿತ್ಯ ಪುಷ್ಪೋದ್ಯಾನದಲ್ಲಿ ಹೊಸ ಹೊಸ ಪರಿಮಳಭರಿತ ಪುಷ್ಪಗಳಂತಹ ಕವಿಕುಲತಿಲಕರೂ, ಸ್ಫೂರ್ತಿದಾಯಕ ಬರೆಹಗಾರರೂ ದಿನೇ ದಿನೇ ವೃದ್ಧಿಯಾಗಲಿ, ಹಳೆಯದು ಹೊಸದು, ಬೆಂಗಳೂರು, ಮಂಗಳೂರು, ಧಾರವಾಡ, ಮೈಸೂರು, ದಕ್ಷಿಣ ಕನ್ನಡ ಉತ್ತರ ಕನ್ನಡವೆಂಬ ಭೇದಬೀಜಗಳು ಮೊಳಕೆಗೊಳ್ಳದಿರಲಿ ಎಂದೂ, ರಾಜಕೀಯದಲ್ಲಿ-ಸರಕಾರ ಕೊಂಗ್ರೆಸ್ಸುಗಳೊಳಗೆ ನೆಮ್ಮದಿ[illegible]ಟಾಗಿ ತುರಂಗವಾಸಿಗಳಾದ ನಮ್ಮ [illegible]ದರ ಸಹೋದರಿಯರು ಬೇಗನೇ ಹೊರಬಂದು ದೇಶಸೇವಾನಿರತರಾಗಲಿ, 'ಬಡವರ ಬಂಧು' ಮಹಾತ್ಮಾ ಗಾಂಧಿಯವರು ಸೆರೆಯಿಂದ ಬಿಡುಗಡೆ ಹೊಂದಲಿ ಎಂದೂ, ಧಾರ್ಮಿಕದಲ್ಲಿ-ಗುರುವಯ್ಯೂರಿನ ದೇವಸ್ಥಾನ ಪ್ರವೇಶ ಸಾಹಸದಲ್ಲಿ ನಾಳೆ ಪ್ರಾರಂಭಿಸುವರೆಂದಿದ್ದ ಆಮರಣಾಂತಿಕ ಉಪವಾಸವನ್ನು ಗಾಂಧಿಜೀಯವರು ಕೈಕೊಳ್ಳುವಂತಹ ಅಗತ್ಯ ಪ್ರಸಂಗವು ಒದಗದಂತೆ, ಅಲ್ಲಿಯ ಇಲ್ಲಿಯ ಮತ್ತೆಲ್ಲೆಲ್ಲಿಯ ಜನಾಂಗವೂ, ಸನಾತನಿಗಳೂ ಪವಿತ್ರೋದ್ದೇಶದಿಂದ ಯತ್ನಗೈಯಲಿ ಎಂದೂ, ಅಂತ್ಯದಲ್ಲಿ-ಭಾರತಮಾತೆಯು ಸ್ವರಾಜ್ಯ ಶಿಖರವನ್ನೇರಿ ತನ್ನ ಮಕ್ಕಳನ್ನು ಹರ್ಷಚಿತ್ತದಿಂದ ಹರಸುವ ಶುಭದಿನವು ಬೇಗನೆ ಸನ್ನಿಹಿತವಾಗಲಿ ಎಂದೂ ಪ್ರಾರ್ಥಿಸಿ ನಮ್ಮ ಸಮಸ್ತ ವಾಚಕರಿಗೆ, ಪೋಷಕರಿಗೆ, ಪ್ರೇರೇಪಕರಿಗೆ, ಲೇಖಕರಿಗೆ ಜಾಹೀರಾತುದಾತರಿಗೆ ೧೯೩೩ರಲ್ಲಿ ಸರ್ವಮಂಗಳವಾಗಲೆಂದು ಕೋರಿ ನಮಿಸುವೆವು.

ODE ON

Badavara Bandhu.

(FRIEND OF THE POOR)

(BY RAGHU.)

Blessed indeed Thou
art by Ra M
As Thou Thy Soul in
service spend. Ye A
Dearer than life, hu-
manity Thou lovet H
All for Love–as in
Love lives Indi A
Verily! a guide to the
poor Thou ar T
Ardently Thou desireth
for their freedo M
Ready to cast Thy life
for Bharatvarsha A
As sacrifice is the Key-
note of Thy livin G
But where art [illegible], O
inca[illegible] Ish A
[illegible] we T[illegible]
fo[illegible]sake N
[illegible]t Thy
jail [illegible] pen D
D ally we pray for Thy
early release[illegible] wit H
Humble offering [illegible] His
feet, we cry, Ja[illegible]ndhik I
Up! Mother In[illegible]
Thy Saviour is here.

ಬಡತನದ ಪ್ರಭಾವ.

ಲೇಖಕರು:_ಶ್ರೀ. ಕೆ. ಸೂರ್ಯನಾರಾಯಣರಾವ್, ಬಂಟ್ವಾಳ.

"ಸದಾ ಸದಾ ಸಾಯುತ್ತಿರುವೆನಲ್ಲಾ"

"ದೇವರೆ, ಇಲ್ಲ! ಇಲ್ಲ! ಅಯ್ಯೊ! ಇಲ್ಲ. ಇಲ್ಲ."

"ಸ_ದಾ, ಸ_ದಾ, ನಿಮಗಾರು ಗತಿ? "

"ಅಯ್ಯೋ ದೇವರೇ; ನಾನೇನು ಮಾಡಲಿ?"

"ನನ್ನಂತಹವನ ಕೈ ಯಾಕೆ ಹಿಡಿದಿ ಸದಾ?"

"ದೇವ, ನನ್ನ ಭಾಗ್ಯ! ಕಂಠ ಆರುತ್ತದೆ. ಮಾತನಾಡಬೇಡಿ"

"ಸದಾ, ಕೂಸಮ್ಮನಲ್ಲಿಯೂ ನಾಲ್ಕಾಣೆ ಸಾಲ ಸಿಗಲಿಲ್ಲವೇ?"

"ಅವರ ಕೈಲಿಲ್ಲವಂತೆ_ನೀವು ಸುಮ್ಮನೆ ನಿದ್ರೆ ಹೋಗಿ! ದೇವರಿದ್ದಾನೆ. ಮಾತನಾಡಿದರೆ ಶಕ್ತಿ ಕಡಿಮೆಯಾಗುತ್ತದೆ.

"ಅಯ್ಯೊ! ಸದಾ, ಸಾಲದ ಹೊರೆಯೇ".

ಗುಡಿಸಲಿನ ಒಂದು ಕೊನೆಯಲ್ಲಿ ಮಂಚದ ಮೇಲೆ ವ್ಯಾಧಿಗ್ರಸ್ತನಾದ ರಂಗಪ್ಪನು ಮಲಗಿದ್ದನು. ಸದಾರಮೆಯು ಗಂಡನ ಪ್ರಾಣೋತ್ಕ್ರಮಣ ಕಾಲವು ಸಮೀಪಿಸುತ್ತಿರುವುದನ್ನು ಕಂಡು ಪಂಜರದೊಳಗೆ ಸಿಲುಕಿದ ಹುಲ್ಲೆಯಂತೆ ಕಳವಳಿಸುತ್ತಿದ್ದಳು. ಸುಮಾರು ೧೦ ಘಂಟೆ ರಾತ್ರಿಯಾಗಿದ್ದಿತು. ಸದಾರಮೆಯು ರೋಗಿಯ ಸಮೀಪ ಮಿಣಿಮಿಣಿ ದೀಪವೊಂದನ್ನುರಿಸಿಟ್ಟು, ತನ್ನ ಸಣ್ಣ ಮಕ್ಕಳಿರಡನ್ನು ಅಲ್ಲೇ ಮಲಗಿಸಿ, ತಾನು ಕುಳಿತು ಕಣ್ಣು ತೂಕಡಿಸುತ್ತಿದ್ದಳು.

"ರಂಗಪ್ಪ! ರಂಗಪ್ಪ!!"

ಸದಾರಮೆಯು ಗಾಬರಿಗೊಂಡು ತಟ್ಟನೆದ್ದಳು. ಹೊರಗೆ ತಮ್ಮ ಮನೆಯ ಧನಿಯು ಕರೆಯುತ್ತಿರುವನೆಂದು ಅವಳಿಗೆ ನಿಮಿಷಾರ್ಧದಲ್ಲಿ ಹೊಳೆಯಿತು. ಧನಿಯು ಮುಂಚಿನ ದಿನ ಗದರಿಸಿ ಗಡುವಿಟ್ಟಂತೆ ಮರುದಿನ ರಾತ್ರೆ ಬರದಿರನೆಂದು ಅವಳು ನೆನಸಿದ್ದಳು. ಧನಿಯು ದಿನಾಲೂ ರಾತ್ರೆ ಬಂದು ಪೀಡಿಸುತ್ತಿರುವುದನ್ನೂ ಅವನಿಗೆ ತನ್ನ ಮೇಲಿರುವ ಅದೊಂದು ಭಾವವನ್ನೂ ಕಂಡು ಸದಾರಮೆಗೆ ತನ್ನ ಸಂಶಯವು ತನ್ನಲ್ಲೇ ಇದ್ದಿತು. ಧನಿಯು ಮತ್ತೆ ಪುನಃ ಕರೆಯಲು, ತ್ವರೆಯಿಂದೆದ್ದು ಬಾಗಿಲ ಚಿಳಕ ನುಟ್ಟಿಲನ್ನಿಳಿದಳು.

ಬೆಳದಿಂ ಹಿಟ್ಟು ಚೆಲ್ಲಿದಂತೆ ಪಸರಿಸಿದೆ. ಸುತ್ತುಮುತ್ತಲೂ ವಾದ ಹಿತ್ತಿಲು. ಸಮೀಪ ಒಂದು ಮನೆಯೂ ಇಲ್ಲ. ನಿಶ್ಶಬ್ಧತೆಯ ವಾತಾ ಗಂಭೀರತೆಯ ಕಾಳರೂಪವನ್ನು ತಾಳಿದ್ದಿತು.

ಧನಿ:—ಎಷ್ಟಿದೆ?

ನಿರುತ್ತರ.

ಧನಿ:-ಎಷ್ಟಿದೆ? ಏನು ಸುಮ್ಮನೆ ಭಿಕ್ಷೆ ಬೇಡ ಬಂದುದೇ? ತಿಂಗಳು ಮೂ ದು ವಲ್ಲ! ಹಿತ್ತಿಲು ಮನೆಗಳ ೬ ರೂಪಾಯಿ ಬಾಡಿಗೆಯಲ್ಲಿ ಒಂದು ರೂಪಾಯಿ ದರೂ ಎಲ್ಲಿಂದಾದರೂ ತರಲಸಾಧ್ಯವಾಯಿತೇ?

ಸದಾರಮೆ:-ಮಹಾಶಯ, ಅವರಿಗೆ ನಿನ್ನೆಗಿಂತ ವಿಪರೀತವಿದೆ. ಎಲ್ಲಿ ಹೊರಡಲಾರದಾದೆ.

ಧನಿ:—ಅದೇನೋ ನನಗೆ ತಿಳಿಯದು. ಇದೆಲ್ಲಾ ಕಣ್ಣುಕಟ್ಟು! ನೀವು ಊಟ ಮಾಡುವುದಿಲ್ಲವೋ? ಮದ್ದಿಗೆ ಎಲ್ಲಿಂದ ಬರುತ್ತದೆ ಹಣ? ಅದರಿಂದ ಸ್ವಲ್ಪವನ್ನಾದರೂ ನನಗೆ ಕೊಡಲಿಕ್ಕೆ ಹೇಳು.

ಸದಾರಮೆ:—ಮದ್ದು ತರದೆ ನಾಲ್ಕು ದಿನಗಳಾದುವು; ಬರೇ ಅಕ್ಕಿಯೊಂದಿಷ್ಟನ್ನು ಬೇಯಿಸಿ ಕುಡಿಯುತ್ತಿದ್ದೇವೆ. ನಾಳೆಗೆ ಆ ಅಕ್ಕಿಯೂ ಮುಗಿದರೆ—ಮತ್ತೆ.

ಧನಿ:—ಮುಗಿದರೇನು? ನನ್ನ ಮನೆಗೆ ಬರಬಾರದೇ? ಕೆಲಸ ಮಾಡಿ ತಿನ್ನಬಹುದಲ್ಲಾ?

ಮಹಾಶಯ, ಸ್ವಲ್ಪ ಕರುಣೆ ಇಡಬೇಕು?

ಧನಿ:—ಇಗೊ, ಈ ಕಪಟ ನೆವಗಳ ಅಗತ್ಯವಿಲ್ಲ! ನಾಳೆ ನನ್ನ ಬಾಡಿಗೆಯನ್ನು ಸಲ್ಲಿಸದಿ ೀಕೆ! ಅರ್ಧವನ್ನಾದರೂ ಕೊಟ್ಟರೆ ಸರಿ! ಇಲ್ಲದಿದ್ದರೆ ಮನೆಯ ಹೊರ- ಆಗಬಹುದು. ನಾಳೆ—ದೇವರಿದ್ದರೆ ಕೊಟ್ಟೇನು.

ಧನಿ ಪುಂಡರೀಕ ಪಂಡಿತರೆಂದರೆ ಒಳ್ಳೆ ಸಂಪನ್ನರು. ನೋಡಿದ್ದಲ್ಲಿ ಅವರ ಭೂಮಿ. ಯುದ್ದಕ್ಕೂ ಅವರ ಒಕ್ಕಲುಗಳೇ! ಹುರಿಮೀಸೆಯನ್ನು ತಿರುಗಿಸಿ ಮೂಗಿನಡಿ ಸಿ ೊಂಡು ಅವರು ಕಣ್ಣು ಕೆರಳಿಸಿ ನಡೆದರೆ, ಧೈರ್ಯವಿಲ್ಲದ ಒಕ್ಕಲುಗಳಂತಿರಲಿ, ಧೈರ್ಯವಿದ್ದ ಸಾಮಾನ್ಯ ಒಕ್ಕಲುಗಳೂ ಕೂಡ ಗಡಗಡನೆ ನಡುಗುತ್ತಿದ್ದರು. ಪಂಡಿತರು ಅಂತಹ ಕಠೋರ, ಗಂಭೀರ ಮುಖಮುದ್ರೆಯುಳ್ಳವರು. ಕೋಪವೆಂಬುದು ಅವರ ಮೂಗಿನ ತುದಿಯಲ್ಲೇ. ಅವರಿಗೆ ಬಡವರೆಂದರೆ ಕಸಕಡ್ಡಿಯಂತೆ. ಬಡವರು ಬದುಕುವುದೇ ಪಾಪವೆಂದು ಅವರು ಎಷ್ಟೋ ಸಲ ಒಕ್ಕಲುಗಳ ಅಂಗಳದಲ್ಲಿ ನಿಂತು ಅಬ್ಬರಿಸಿ ಹೇಳಿದ್ದರು. ತನ್ನ ಕ್ರಮ—ಆ ಕೈಲಿ ದೋಸೆ, ಈ ಕೈಲಿ ಹಣ—ಎಂಬುದೆಂದೇ ರ ಅಂಬೋಣ. ದಾನಧರ್ಮಗಳಲ್ಲಿ ಅವರಷ್ಟು ಗಿಡ್ಡ ಕೈಯವರು ಬೇರಾರೂ ಇಲ್ಲವೆಂದು ಅಲ್ಲಿಯ ಎಲ್ಲಾ ಭಿಕ್ಷುಕರಿಗೆ ಗೊತ್ತು. ಆದುದರಿಂದ ಪುಂಡರೀಕ ಪಂಡಿತರ ಮನೆಯಂಗಳದ ರೂಪವು ಕೂಡ ಹೇಗಿರುವುದೆಂದು ಯಾವ ಬಡವನಿಗೂ ತಿಳಿದಿದ್ದಿಲ್ಲ. ಅಂದರೆ, ಅವರ ಮನೆಗೆ ಭಿಕ್ಷುಕರು ಹೋಗುವಂತೆಯೇ ಇದ್ದಿಲ್ಲ. ಲುಗಳು ಬಾಡಿಗೆ, ಕಾಣಿಕೆಗಳನ್ನು ಬಾಕಿ ಮಾಡಿಟ್ಟುಕೊಂಡರಂತೂ ಲಯಕಾಲವೇ! ಒಂದೆರಡು ಒಕ್ಕಲುಗಳ ಬಡಸ್ತ್ರೀಯರು ಅವರ ಕಾಮುಕ ದೃಷ್ಟಿಗೊಳಗಾಗದಿರಲಿಲ್ಲ. ಹಣ ಬಾಕಿಯಾದರೂ ಅವರಿಗೆ ಹೆಚ್ಚಿಗೆ ವ್ಯಸನವಿರುತ್ತಿದ್ದಿಲ್ಲ. ಹೇಗಾದರೂ ಮಾಡಿ, ತನ್ನ ಅಧಿಕಾರಮದವನ್ನು ಪ್ರದರ್ಶಿಸಿ—ಹಣ ಸ್ವಲ್ಪ ವೆಚ್ಚಮಾಡಿಯಾದರೂ ಅವರು ಬಡ ಯೌವನೆಯರ ಪರಿಚಯವನ್ನು ಮಾಡಿಕೊಳ್ಳದಿರುತ್ತಿದ್ದಿಲ್ಲ. ಅಂತಾಗಿ ಪಂಡಿತರು ಎಲ್ಲೆಲ್ಲೂ ಪ್ರಸಿದ್ಧರು. ಅವರು ಒಂದೆರಡು ಸಲ ದರ್ಶನವಿತ್ತ ಮನೆಯು ಅದರಲ್ಲಿದ್ದ ಬಡ ಸ್ತ್ರೀಯರ ಸಮೇತ ಅವರ ಬಗಲೊಳಗೆಂದು ಎಲ್ಲರೂ ಅಭಿಪ್ರಾಯಪಡುತ್ತಿದ್ದರು.

ಪಂಡಿತರು ಸದಾರಮೆಯನ್ನು ಈ ದುರ್ದಿನಗಳಲ್ಲಿ ಪೀಡಿಸುತ್ತಿರುವುದಕ್ಕೆ ಅವಳ ಅಂಚಕೊಂಚ ರೂಪವೂ ಕಾರಣವಾಗಿದ್ದಿತು. ಅವರು ಸದಾರಮೆಯಲ್ಲಿಗೆ ರಾತ್ರಿ ಹೊತ್ತು ಹೋಗುತ್ತಿದುದಕ್ಕೆ ಇದೂ ಒಂದು ಕಾರಣವೆಂದು ಸದಾರಮೆಗೂ ತಿಳಿದಿದ್ದಿತು, ಪಂಡಿತರಿಗೂ ಅದರ ಅರಿವಿದ್ದಿತು.

ಧನಿಯು ಹಣ ವಸೂಲಿಗೆ ನಾಳೆ ಬರುತ್ತೇನೆಂದು ೨೪ ತಾಸುಗಳ ಅವಧಿಯನ್ನು ಕೊಟ್ಟುದನ್ ಡಿ ಸದಾರಮೆಗೆ ಒಮ್ಮೆಗೆ ಉಸಿರು ಬಂದಂತಾಯಿತು. ಪಂಡಿತರು ೂರಟು ನೆ ನೆಟ್ಟಗೆ ಗಂಡನ ಮಂಚದ ಬಳಿಗೋಡಿದಳು—ನಿದ್ದೆ ಬಿದ್ದಿದೆ. ಧನಿಯು ಡನಿಗೆ ಕೇಳಿ, ಅವನೆಲ್ಲಿ ದುಃಖಕ್ಕೊಳಗಾಗುತ್ತಾನೋ ಎಂಬ ಹೆ ೋ ಮುಂಜಾನೆಯಾಯಿತು. ಸದಾರಮೆಯ ಅರ್ಧ ಮನಸ್ಸು ಗಂಡನ ಶುಶ್ರೂಷೆಯಲ್ಲಿದೆ. ಅರ್ಧ ಯೋಚನೆಯು ಧನಿಯ ಗದರಿಸುವಿಕೆಯ ಪರಿಣಾಮದ ಮೇಲಿದೆ—ತನ್ನ ಸಂಶಯದ ಮೇಲಿದೆ. ಯೋಚಿಸುತ್ತಾ ಇದ್ದಂತೆ, ಪೂರ್ವಾಹ್ನವು ದಾಟ ಮಧ್ಯಾಹ್ನವು ಸಮೀಪಿಸಿತು. ದೂರದಲ್ಲಿ ಸುತ್ತುಮುತ್ತಲಿರುವ ಪರಿಚಯಸ್ಥರೊಡನೆ ಸಾಲ ಮಾಡಿ ಮಾಡಿ ದಣಿದಿದ್ದಳು. ಮುಂದಕ್ಕೆ ಒಂದು ಪಾವಾಣೆಯನ್ನಾದರೂ ಎರವಾಗಿ ತರಲು ಅವಳಲ್ಲಿ ಧೈರ್ಯವು ಸಾಲದೆ ಹೋಯಿತು. ಯೋಚಿಸುತ್ತಾ ಇದ್ದಳು. ಪಾಪ! ೩ ರೂಪಾಯಿಗಳನ್ನು ಎಲ್ಲಿಂದ ತಂದಾಳು? ತನ್ನಲ್ಲಿಲ್ಲವೆಂದರೆ ಈ ರಾತ್ರೆ ಧನಿಯೇನು ಮಾಡನು?

ಸಂಜೆ ೪ ಘಂಟೆ ಮೀರಿದ್ದಿತು. ಸೂರ್ಯನ ತಾಪವು ಕಡಿಮೆಯಾಗುತ್ತಾ ಬರುತ್ತಿತ್ತು. ಅಷ್ಟರಲ್ಲಿ ರಂಗಪ್ಪನು ಒಂದು ಕೆಮ್ಮು ಕೆಮ್ಮಿದ. ನರಳಿದಂತಾಗಲು,—ಸದಾರಮೆಯು ಅವನ ಬಳಿಗೋಡಿ ಹಣೆಯ ಮೇಲೆ ಕೈಯಿಟ್ಟಳು. ದುರದೃಷ್ಟ! ರಂಗಪ್ಪನು ಮೃತ್ಯುವಶ!!! ಅವನ ಕಣ್ಣುಗಳು ಮೇಲೇರಿದ್ದುವು. ಗುಟುಕು

೧ ಲವಂಗಕ್ಕೆ ೪೦ ಭಾಗ ಕುದಿಯುವ ನೀರು ಸೇರಿಸಿ ೧೫ ನಿಮಿಷಗಳಲ್ಲಿ ಮಾಡಲ್ಪಟ್ಟ ಕಷಾಯವನ್ನು ಮಕ್ಕಳ ಉಬ್ಬರಕ್ಕೆ ಕೊಡಬೇಕು.

ಬೂ ರ್ ವಾಷಿಂಗ್ಟನ್.

ಲೇಖ —ಶ್ರೀ. ಮಾದರಬೆಟ್ಟು ರಂಗರಾಯ.

(ಬಡತನವು ಸಾಮಾನ್ಯವಾದ ಸಾಂಕ್ರಾಮಿಕ ರೋಗ. ಆತ್ಮಾವಲಂ , ಧೈರ್ಯೋತ್ಸಾಹಗಳಿದ್ದರೆ ಈ ಮಹದ್ರೋಗದಿಂದಲೂ ಯುಕ್ತಪಾಠವನ್ನು ಕಲಿಯಬಹುದು. ಇಂತಹ ಅಭೂತಪೂ ವ್ಯಕ್ತಿಗಳ ಚರಿತ್ರೆಗಳು ವಾಚಕರಿಗೆ ರುಚಿಸದಿರವು.)

(ಬೂಕರ್ ವಾಷಿಂಗ್ಟನ್ನನೇ ಬರೆದ ಆತ್ಮಚರಿತ್ರೆಯಿಂದ ಸಂ ದುದು.)



ಅಸಹನೀಯವಾದ ಬಡತನದ ಕರ್ಮುಡ್ಡುವಿನಲ್ಲಿ, ಜೀತಗಾರಿಕೆಯಿಂದ ನರಳುತ್ತಿದ್ದ ಅಸ್ವಾತಂತ್ರ್ಯರಾದ ದಾಸಜನರಲ್ಲಿ, ಮಣ್ಣಿನಲ್ಲಿ ಹುಟ್ಟಿದ ಚಿನ್ನದಂತೆ ಜನಿಸಿ, ತನ್ನ ಸದಾಶಯಮೂಲವಾದ ಪರಮೋತ್ಸಾಹದಿಂದ ಲೂ, ಎದುರಾದ ಎಡರುತೊಡರುಗಳನ್ನು ತಡೆಯುವಂತ ಸಧೈರ್ಯವಾದ ನಿಜಾತ್ಮಬಲದ ಕರ್ತೃತ್ವಶಕ್ತಿಯಿಂದಲೂ ವಿದ್ಯೆಗಲಿತು ಮೇಲೇರಿ, ತನ್ನಂತೆಯೇ ಬಡವರಾಗಿದ್ದ ನಿಜ ಬಾಂಧವರನ್ನು ಮುಂದಕ್ಕೆ ತಂದು, ತ್ರಿಕರಣಪೂರ್ವಕವಾಗಿ ಪರೋಪಕಾರವನ್ನೇ ಪರಮ ಧ್ಯೇಯವಾಗಿಟ್ಟುಕೊಂಡ ನಿಸ್ಪೃಹನಾದ ಮಹಾ ರುಷನೇ ಪ್ರಕೃತ ಚರಿತ್ರಾನಾಯಕನಾದ ಬೂಕರ್ ವಾಷಿಂಗ್ಟನ್ ಎಂಬಾತನು. ಬ ಂಗಾಗಿ ಹೆಣಗಾಡಿ ಲೋಕವಿಖ್ಯಾತ ದೀನಜನ ಸೇವಕನಾದವನು ಇವನೇ.

ಆತನು ಅಮೇರಿಕಾ ಖಂಡದ ವರ್ಜಿನಿಯ ದೇಶದ ಒಂದೂರಲ್ಲಿ, ಸನ್ ೧೮೫೮ ಅಥವಾ ೧೮೫೯ನೆಯ ಇಸವಿಯಲ್ಲಿ ಒಂದು ದಿವಸ ಹುಟ್ಟಿದನು. "ನೀಗ್ರೊ" ಎಂಬ ಕರೀ ಜನರ ಪಂಗಡದಲ್ಲೇ ಆತನ ಜನನ. ಅವನ ಪಿತನಾಗ ಅವನ ಬಳಿಯಲ್ಲಿರದೆ, ಆಗ ಪ್ರಚಾರದಲ್ಲಿದ್ದ ಜೀತಗಾರತನಕ್ಕೆ ತುತ್ತಾಗಿ ಎಲ್ಲಿಯೋ ನರಳುತ್ತಿದ್ದನು. ಒಬ್ಬ ಅಣ್ಣನೂ ಒಬ್ಬಳು ತಂಗಿಯೂ ಅವನ ಒಡಹುಟ್ಟಿದವರು. ತಾಯಿಯ ಆರೈಕೆಯೇ ಅವನನ್ನು ಬೆಳೆಸಿತು. ದಾಸತ್ವವೇ ಅವರಿಗೆ ಗತಿಯಾಗಿತ್ತು. ಹತ್ತಿಯ ಒಂದು ಹೊಲದ ಕೂಲಿಗಾರರಿಗೆ ಅಟ್ಟಿಕ್ಕುವುದೇ ಅವನ ತಾಯಿಯ ಕೆಲಸ. ನೊಣ ಹೊಡೆಯುವುದು, ಕಸಗುಡಿಸುವುದು, ನೀರು ಹೊರುವುದು ಮೊದಲಾದ ಕೆಲಸಗಳನ್ನು ಪುಟ್ಟ ಬಾಲಕನಾದ ಬೂಕರನು ಮಾಡುತ್ತಿದ್ದನು. ಅಯ್ಯೋ ಪಾಪ! ಆಗ ಅವರ ದುರವಸ್ಥೆಯನ್ನೆಷ್ಟೆನ್ನಲಿ? ಕಸದ ಗುಡ್ಡೆಯೇ ಅವರ ಹಾಸಿಗೆ; ನೂರಾರು ಸೂಜಿಗಳಿಂದ ಮೈಯನ್ನು ಚುಚ್ಚುವಂತಾಗುವ ಹಾಳು ಗೋಣಿ ರಟ್ಟಿನ ಅಂಗಿಯೇ ಅವರ ಉಡಿಗೆ ಇನ್ನು ಊಟದ ಗತಿಯೋ! ನಾಯಿಬೆಕ್ಕುಗಳ ಊಟವೂ ಅವರ ಷ್ಟಒಂದೇ!

ಹೀಗಿರಲು ಅವರಿಗೆ ಸ್ವಾತಂತ್ರ್ಯದ ಸುಯೋಗವು ಮೂಡಿ ಕಾರದವರು ನೀಗ್ರೋ ಜನರ ಜೀತಗಾರಿಕೆಯನ್ನು ತಪ್ಪಿಸಿದರು. ಅಷ್ಟರಲ್ಲಿ ಕ್ಕಪ್ಪನೊಬ್ಬನು, ತಾನು ಪಶ್ಚಿಮ ವರ್ಜಿನಿಯದ ಮಾಲ್ಡನ್ ಪಟ್ಟಣದಲ್ಲಿ ತ್ತ ವೆಲ್ಲರೂ ಇಲ್ಲಿಗೆ ಬರಬೇಕೆಂದೂ ಹೇಳಿ ಕಳುಹಿಸಲು, ಬೂಕರನ ತಾಯಿಯು ಳನ್ನು ಕಟ್ಟಿಕೊಂಡು, ನೂರಾರು ಮೈಲುಗಳ ದಾರಿಯನ್ನು ಕಡು ಕಷ್ಟದಿಂದ ಸಾಗಿ ಮಾಲ್ಡನ್ನನ್ನು ಸೇರಿದಳು. ಅಲ್ಲಿಯು ಅವರ ವಾಸಸ್ಥಾನವಾದರೋ ಮೊದಲಿಗಿಂತಲೂ ಹೀನಾಯವಾದ ಒಂದು ಕೊಟ್ಟಿಗೆ. ಹಸುಳೆಯಾಗಿದ್ದರೂ, ಬೂಕರನು ಮಲತಂದೆಯೊಂದಿಗೆ ಅಲ್ಲಿ ಉಪ್ಪಿನ ಗಣಿಯಲ್ಲಿ ಕೆಲಸ ಮಾಡಬೇಕಾಗಿತ್ತು.

ಬೂಕರನಿಗೆ ತರಳತನದಿಂದಲೂ ಓದುವುದರಲ್ಲಿ ಅತ್ಯಾಶೆ. ಎಲ್ಲಿಯೋ ಪುಣ್ಯವಂತರ ಮಕ್ಕಳು ಓದುತ್ತಿದ್ದುದನ್ನು ಕಂಡೇ ಅವನಿಗಾ ಬಗೆಯ ಆಸೆಯು ಮೂಡಿ, ಅದು ದಿನೇ ದಿನೇ ಏರಲಿಕ್ಕೆ ಕಾರಣ. ಅವನ ಪ್ರಬಲಾಶಯವನ್ನರಿತು, ಅವನ ತಾಯಿಯು ಹೇಗೋ ಒಂದು ಹಳೇ ಪುಸ್ತಕವನ್ನು ಸಂಪಾದಿಸಿದಳು. ಆಕೆಯಾದರೂ ತನ್ನ ಮಕ್ಕಳು ಮುಂದಕ್ಕೆ ಬರಬೇಕೆಂದು ಬಹಳ ತವಕಪಡುತ್ತಿದ್ದಳು. ಆದುದರಿಂದ ಆ ಸಾಧ್ವಿಯು ಎಂತಹ ದುಸ್ಥಿತಿಯಲ್ಲಿದ್ದರೂ ಅಧೈರ್ಯಪಡುತ್ತಿರಲಿಲ್ಲ. ಮಾತೆಯ ಸ್ವಭಾವವೇ ಬೂಕರನಿಗೆ ಅವಳ ಮೊಲೆಹಾಲಿನಲ್ಲೇ ಬೆರೆತು ಬಂದಿತ್ತು. ಸರಿ, ಪುಸ್ತಕವೊಂದು ಸಿಕ್ಕಿತು. ಆದರೆ ಓದಕಲಿಸುವವರಾರು? ಸುತ್ತಮುತ್ತಲಿನವರಾರಿಗೂ ಓದು ಬಾರದು, ಆದು ಬರುವ ಬಿಳಿಯ ಜನರಲ್ಲಿ ಹೋಗಿ ಕೇಳೋಣವೆಂದರೆ ಭಯ. ಹೀಗಾಗಿ ಆತನೇ ಸ್ವಯಂ ಗುರುವಾಗಿಯೂ, ಸ್ವಯಂ ಶಿಷ್ಯನಾಗಿಯೂ ಹೇಗೋ ಅಕ್ಷರಗಳನ್ನು ಕಲಿತನು. ಆ ಚಿಕ್ಕ ವಯಸ್ಸಿನಲ್ಲಿ ವಿದ್ಯೆಯ ಮೇಲಿರುವ ಅವನ ಉತ್ಸಾಹವಾದರೂ ಎಷ್ಟದು!

ಇಂತಿರಲು, ಅವನಂತೆಯೇ ಬಡವರಾದ ಕೆಲವರು ಸೇರಿ, ಬರೇ ಸ್ವಲ್ಪ ವಿದ್ಯೆಗಲಿತಿದ್ದ ಒಬ್ಬ ನೀಗ್ರೊ ಸಿಪಾಯಿಯನ್ನು ಉಪಾಧ್ಯಾಯನನ್ನಾಗಿ ಗೊತ್ತುಮಾಡಿ, ಒಂದು ಪುಟ್ಟ ಪಾಠಶಾಲೆಯನ್ನು ಏರ್ಪಡಿಸಿದರು. ಬೂಕರನೂ ಅದೇ ಶಾಲೆಯಲ್ಲಿ ಸಮಯ ಸಿಕ್ಕಿದಾಗ ಕಲಿಯಲಾರಂಭಿಸಿದನು. ಆದರೆ ಕೆಲವು ದಿನಗಳಲ್ಲೇ ಅವನ ಮಲತಂದೆಯು ಉಪ್ಪಿನ ಗಣಿಯಲ್ಲೇ ಅವನನ್ನು ನಿಲ್ಲಿಸಿಕೊಂಡುಬಿಟ್ಟುದರಿಂದ, ಅವನಾಶೆಯು ಭಗ್ನವಾಯಿತು. ಕಂಕುಳಲ್ಲಿ ಹೊತ್ತಗೆಗಳನ್ನು ಹಿಡಿದುಕೊಂಡು ಹೋಗುತ್ತಿರುವ ಬಾಲರನ್ನು ನಿತ್ಯವೂ ಕಂಡು ಕಂಡು ಅವನಿಗತ್ಯಂತ ಸಂಕಟವಾಯಿತು. ಕಡೆಗೆ ಧೈರ್ಯಾನ್ವಿತನಾದನು; ಶ್ರದ್ಧೋತ್ಸಾಹಗಳು ಇಮ್ಮಡಿಸಿದುವು. ಉಪಾಧ್ಯಾಯನೊಡನೆ ಬೇಡಿಕೊಂಡು ರಾತ್ರಿಯಲ್ಲಿ ಅವನಿಂದ ವಿದ್ಯೆಗಲಿಯಲಾರಂಭಿಸಿದನು.

ಮುಂದೆ ಕೆಲ ದಿನಗಳಲ್ಲೇ ಇನ್ನೊಂದು ಗಂಡಾಂತರ! ಅವನನ್ನು ಉಪ್ಪಿನ ಗಣಿಯಿಂದ ದುರ್ಧರವಾದ ಕಲ್ಲಿದ್ದಲ ಗಣಿಗೆ ವರ್ಗಾಯಿಸಿಬಿಟ್ಟರು. ಅವನು ಅಲ್ಲಿಯ ಕಷ್ಟವನ್ನಾದರೂ ಸಹಿಸಿ ಹಗಲಿಡೀ ದುಡಿದು, ರಾತ್ರಿಯಲ್ಲಿ ೩ ಮೈಲು ದೂರವಿರುವ ಶಾಲೆಗೆ ಹೋಗಲಾರಂಭಿಸಿದನು!

ಒಂದು ದಿನ ಅವನು ಕಲ್ಲಿದ್ದಲ ಗಣಿಯಲ್ಲಿ ಕೆಲಸಮಾಡುತ್ತಿದ್ದಾಗ 'ಹ್ಯಾಂಪ್ಟನ್' ಎಂಬ ಪಟ್ಟಣದಲ್ಲಿ "ನಾರ್ಮಲ್ ಅಂಡ್ ಆಗ್ರಿಕಲ್ಚರಲ್ ಇನ್ಸ್ಟಿಟ್ಯೂಟ್" ಎಂಬೊಂದು ಪಾಠಶಾಲೆಯು ಕರೀ ಜನರಿಗಾಗಿಯೇ ಏರ್ಪಾಡಾಗಿರುವುದೆಂದು ಯಾರೋ ಮಾತಾಡಿಕೊಂಡದ್ದನ್ನು ಅವನು ಕೇಳಿ, ಹ್ಯಾಗಾದರೂ ಮಾಡಿ ತಾನು ಅಲ್ಲಿಗೆ ಹೋಗಲೇ ಬೇಕೆಂದು ನಿಶ್ಚೈಸಿಕೊಂಡನು.

ಈ ನಿಶ್ಚಯದ ಅನುಕೂಲಕ್ಕಾಗಿ ಮುಂದೆ ೨–೩ ತಿಂಗಳ ಆ ಗಣಿ ಯನ ಮನೆಯಲ್ಲಿ ೧೫ ರೂಪಾಯಿ ಸಂಬಳದ ದಾಸನಾದನು. ಆದರೇನು? ಸಂಬಳದ ಅರ್ಧಾಂಶವೆಲ್ಲಾ ಸಂಸಾರದ ಪಾಲಾಯಿತು. ಕಡೆಗಾ ಸಾಹಸಿಯು ನೊಡನೆ ಬೇಡಿ, ಹೇಗಾದರೂ ೮–೧೦ ರೂಪಾಯಿಗಳನ್ನು ಮಾಡಿಕೊಂಡು, ಯ ಆಶೀರ್ವಾದವನ್ನು ಪಡೆದು, ಹ್ಯಾಂಪ್ಟನ್ನಿಗೆ ಹೊರಟನು.

ಆಗ ದಾರಿಯಲ್ಲಿ ಅವನು ಪಟ್ಟ ಕಷ್ಟವು ಅಷ್ಟಿಷ್ಟಲ್ಲ. ಎರಡು ದಿನಗಳಲ್ಲೇ ಕೈಯಲ್ಲಿದ್ದ ಕಾಸೆಲ್ಲಾ ಬರಿದಾಯಿತು. ಒಂದು ದಿನ ರಾತ್ರಿ ಉಪವಾಸದಲೂ, ಚಳಿಯ ಕಾಟದಿಂದಲೂ ರಾತ್ರಿಯಿಡೀ ಓಡಾಡಿದನು. ಕಡೆಗೆ ಕಾಲ್ನಡಿಗೆಯಿಂದಲೇ ಬೇಡಿ ತಿನ್ನುತ್ತಾ ಹ್ಯಾಂಪ್ಟನ್ನಿಗೆ ೮೨ ಮೈಲು ದೂರವಿರುವ 'ರಿಚ್ಮಂಡ್' ಪಟ್ಟಣವನ್ನು ಸೇರಿ, ಅಂಡಲೆದು, ತಿಂಡಿ ಸಿಕ್ಕದೆ, ಒಂದೆಡೆಯಲ್ಲಿ ಮಲಗಿದನು. ಇಷ್ಟು ಕಷ್ಟಪಟ್ಟರೂ ಅವನ ಧೈರ್ಯೋತ್ಸಾಹಗಳು ಮಾತ್ರ ಅಳಿಯದೆ ಏರಿತೆನ್ನಬೇಕು! ಆ ರಾತ್ರಿ ಬೆಳಗಾಗಲು ಹಸಿವೆಯಿಂದ ಕಂಗೆಟ್ಟಿಹನು, ಸಮೀಪವೇ ತಂಗಿದೊಂದು ಸಾಮಾನಿನ ಹಡಗಿನ ಬಳಿಗೆ ಹೋಗಿ ಅದರಲ್ಲಿ ೨ ಗಂಟೆ ಕೆಲಸ ಮಾಡಿ ಸ್ವಲ್ಪ ದುಡ್ಡು ಸಂಪಾದಿಸಿ ಹಸಿವನ್ನು ನಿವಾರಿಸಿದನು. ಮುಂದೆ ಕೆಲವು ದಿನಗಳು ಅದೇ ಹಡಗಿನಲ್ಲೇ ಕೆಲಸಮಾಡಿ ಯಜಮಾನನ ಪ್ರೇಮವನ್ನು ಸಂಪಾದಿಸಿ, ಸ್ವಲ್ಪ ಹಣವು ಕೂಡಿದೊಡನೆಯೇ ಅಲ್ಲಿಂದ ಹೊರಟು, ಯಥಾಕಾಲದಲ್ಲಿ ಹ್ಯಾಂಪ್ಟನನ್ನು ಸೇರಿದನು. ಆಗ ಅವನ ಕೈಯಲ್ಲಿ ಬರೇ ೧॥ ರೂಪಾಯಿ ಮಾತ್ರ ಮಿಗಿದಿದ್ದಿತು.

ಬಳಿಕಾತನು ಅಲ್ಲಿಯ ಶಾಲೆಯನ್ನು ಹುಡುಕಿ ಕಂಡುಕೊಂಡು ಅಲ್ಲಿಯ ಮುಖ್ಯೋಪಾಧ್ಯಾಯಿಣಿಯನ್ನು ನೋಡಿ ಬೇಡಿದನು. ವೇಷಾದಿಗಳಿಂದ ಪಕ್ಕಾ ಪೋಲೀ ಹುಡುಗನಂತೆ ಕಾಣುವ ಅವನನ್ನು ಮುಖ್ಯೋಪಾಧ್ಯಾಯಿನಿಯು ಕಡೆಗಣ್ಣಿಂದ ನೋಡಿ, ೪ ಗಂಟೆಗಳ ವರೆಗೆ ಏನೊಂದು ಉತ್ತರವನ್ನೂ ಕೊಡದೆ, ಬಳಿಕ ಮುಗ್ಗಲು ಕೊಠಡಿಯನ್ನು ಗುಡಿಸುವಂತೆ ಅಪ್ಪಣೆಮಾಡಿದಳು. ಅದರಂತೆ ಆತನು ಕೋಣೆಯನ್ನು ಗುಡಿಸಿ ಝುಳ ಝುಳ ಮಾಡಲು, ಆಕೆಯು ಬಂದು ಪರೀಕ್ಷಿಸಿ, "ನೀನು ಶಾಲೆಗೆ ಸೇರಬಹುದೆ"ಂದಳು. ಅಹಹ! ಆಗಲಾ ಬಡ ಹುಡುಗನಿಗೆ ಎಷ್ಟಾನಂದವಾಗಿರಬಹುದು!

ಸರಿ, ಶಾಲೆಗೇನೋ ಸೇರಿದನು. ಆದರೆ ಊಟದ ಖರ್ಚನ್ನೂ, ಶಾಲಾ ಫೀಜನ್ನೂ, ಪುಸ್ತಕವಸ್ತ್ರಾದಿಗಳನ್ನೂ ಆ ಬಡವನು ಎಲ್ಲಿಂದ ತರುವನು? ಅವುಗಳನ್ನಾದರೂ ಆತನ ಸದ್ವರ್ತನಗಳೇ ಅವನಿಗೆ ಒದಗಿಸಿಕೊಟ್ಟುವು. ಆತನು ಶಾಲೆಯಲ್ಲಿ ಗುಡಿಸುವುದೇ ಮೊದಲಾದ ಕೆಲಸಗಳನ್ನು ಮಾಡುತ್ತ ಊಟದ ಖರ್ಚನ್ನು ಅದರಿಂದ ಕಳೆದನು. ಅವನ ಸನ್ನಡತೆಗೆ ಮೆಚ್ಚಿ, 'ಜನರಲ್ ಆರಂಸ್ಟ್ರಾಂಗ್' ಎಂಬ ಮಹಾ ಪುರುಷರೊಬ್ಬರು ತಮ್ಮ ಸ್ನೇಹಿತರ ಮೂಲಕವಾಗಿ ಅವನ ಶಾಲಾಫೀಜನ್ನು ಕೊಡಿಸಿದರು. ಪುಸ್ತಕಗಳನ್ನಾದರೂ ಆತನು ಇತರ ಹುಡುಗರಿಂದ ಬೇಡಿಕೊಳ್ಳುತ್ತಿದ್ದನು. ಇನ್ನು ಬಟ್ಟೆಗಳೋ? ಉಪಾಧ್ಯಾಯರಾರಾದರೂ ಕರುಣೆಯಿಂದ ಕೊಟ್ಟ ಹಳೆಯ ಬಟ್ಟೆಗಳೇ ಅವನಿಗೆ ಗತಿ!

ವರ್ಷಾಂತ್ಯದ ರಜೆಯಲ್ಲಿ ಅವನು ಅಲ್ಲಿಯ ಒಂದು ಹೋಟೆಲನ್ನು ಸೇರಿ, ದುಡಿದು ನಾಲ್ಕು ಕಾಸು ಸಂಪಾದಿಸಿದನು. ಮರು ವರ್ಷದ ರಜೆಯಲ್ಲಿ ಮಾಲ್ಡನ್ನಿಗೆ ಮರಳಿ, ಮಾತೆಯನ್ನು ನೋಡಿದನು. ಆಗ ವಿದ್ಯಾವಂತನಾದ ಪುತ್ರನನ್ನು ನೋಡಿ ಆ ಪುಣ್ಯಮಾತೆಯು ಮೃತಳಾದಳು! ಆಗ ಬೂಕರನಿಗಾದ ದುಃಖವು ವರ್ಣನಾತೀತವು.

ರಜಾ ಮುಗಿಯುವ ಕಾಲಕ್ಕೆ ಸರಿಯಾಗಿ ಆತನು ಪರಚರ್ಯೆಯಿಂದ ತಕ್ಕಷ್ಟು ದುಡ್ಡು ಗಳಿಸಿ ಪುನಃ ಹ್ಯಾಂಪ್ಟನ್ನಿಗೆ ಹೋದನು. ಸನ್ ೧೮೭೫ನೇ ಇಸವಿ ಜೂನ್ ತಿಂಗಳಿಗೆ ಅವನು ಶಾಲೆಯಲ್ಲಿ ಓದತಕ್ಕುದೆಲ್ಲಾ ಮುಗಿಯಿತು. ಶ್ರಮಪಟ್ಟು ವ್ಯಾಸಂಗ ಮಾಡಿ ಆ ಪ್ರಥಮ ತರಗತಿಯಲ್ಲೇ ಉತ್ತೀರ್ಣನಾದನು. ಮನುಷ್ಯನಿಗೆ ಪ್ರಬಲವಾದ ಆಶೆಯಿದ್ದು, ಅದಕ್ಕೆ ತಕ್ಕ ಪ್ರಯತ್ನವನ್ನು ಎದೆಗೆಡದೆ ಮಾಡಿದರೆ ಆತನು ಮುಂದಕ್ಕೆ ವಿಜಯಿಯಾಗುವನೆನ್ನಲು ಸಂದೇಹವೇನು?

ಆ ಮೇಲೆ ಬೂಕರ್ ವಾಷಿಂಗ್ಟನ್ನನು ಮಾಲ್ಡನ್ ಪಟ್ಟಣದಲ್ಲಿ ನೀಗ್ರೊ ಜನರಿಗಾಗಿ ಏರ್ಪಡಿಸಲ್ಪಟ್ಟ ಶಾಲೆಯಲ್ಲಿ ಉಪಾಧ್ಯಾಯನಾದನು. ಮುಂದೆ ೨ ವರ್ಷಗಳ ಮೇಲೆ ವಾಷಿಂಗ್ಟನ್ ಎಂಬ ಪಟ್ಟಣದ ಶಾಲೆಯಲ್ಲಿಯೂ ೮ ತಿಂಗಳು ಓದಿ ಬಂದನು. ಬಳಿಕ ...ನೆಗೆ ಅವನು ಮಾಡಿದ ಒಂದೆರಡು ಉಪನ್ಯಾಸಗಳ ಮೂಲಕವಾ... ಅವನ ಹೆಸರು ...ಯಲಿಗೆ ಬಂದಿತು. ಸರಕಾರದವರು ಅವನಿಗೊಂದು ಹುದ್ದೆ... ಕೊಡಲು ಸಿದ್ಧರಾದರು. ಆದರೆ ಅದರಿಂದ ತನ್ನ ಸ್ವಂತದ ಪುರೋಭಿವೃದ್ಧಿ... ನೋಡಿದ ಹಾಗಾಗುತ್ತಿತ್ತೆ ವಿನಹ, ಬಡವರಾದ ಸ್ವಬಾಂಧವರಿಗೆ ಏನೂ ಪ್ರಂ... ವಾಗುವುದಿಲ್ಲವೆಂದು ಬಗೆದು, ಆ ಬಡವರ ಬಂಧುವು ಅದನ್ನು ಕಡೆಗ...ಗ... ಅಹಹ! ಅವನ ಮಹತ್ಸ್ವಾರ್ಥತ್ಯಾಗವನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಸರಿ...ದ

ಮುಂದೆ ಆತನು ಮಾಡಿದ ಮಹತ್ಕಾರ್ಯಗಳೇನೂ ಅಷ್ಟಿಷ್ಟಲ್ಲ! ಸ್ವಲ್ಪ...ಾಲ ಹ್ಯಾಂಪ್ಟನ್ನಿನ ಶಾಲೆಯಲ್ಲಿಯೂ ಉಪಾಧ್ಯಾಯನಾಗಿದ್ದು, ಆ ಮೇಲೆ ತಿಳಿವಿನಲ್ಲಿ ... ಸಮಾನರೂ, ಒರಟರೂ, ಅನಾಗರಿಕರೂ ಆದ "ರೆಡ್ ಇಂಡಿಯನ್ಸ್" ಎಂಬ ಅ... ಕದ ಪೂರ್ವ ನಿವಾಸಿಗಳಾದ ಹಲವರನ್ನು ಒಮ್ಮನಸಿನಿಂದಲೂ, ಜಾಗರೂಕತೆಯಿಂದ... ಸುಶಿಕ್ಷಣೆಗೊಳಿಸಿ, ಅವರನ್ನು ನಾಗರಿಕರನ್ನಾಗಿ ಮಾಡಿದನು. ಇದೇನೂ ಸಾಮಾನ್ಯವಾದ ಕೆಲಸವಲ್ಲ. ಬಳಿಕ, 'ಟಿಸ್ಕೆಗಿ' ಎಂಬ ಊರಿನಲ್ಲಿ ನೀಗ್ರೊ ಜನರಿಗಾಗಿ ದೊಡ್ಡದೊಂದು ಪಾಠಶಾಲೆಯು ಅವನಿಂದ ಸ್ಥಾಪಿತವಾಯಿತು. ಸತ್ಕಾರ್ಯನಿರತನಿಗೆ ಸಹಾಯ ಮಾಡದವರುಂಟೆ? ದೊಡ್ಡ ದೊಡ್ಡ ಶ್ರೀಮಂತರನೇಕರು ಈ ಕಾರ್ಯಕ್ಕಾಗಿ ಅವನಿಗೆ ಸಹಾಯಮಾಡಿದರು. ಆತನು ವಿದ್ಯಾರ್ಥಿಗಳ ಮನಸ್ಸಿಗೂ ಕೈಗೂ ಕೆಲಸಗೊಡುತ್ತಿದ್ದುದರಿಂದ, ಆತ್ಮಾವಲಂಬನೆಯೂ, ವಿದ್ಯಾಭ್ಯಾಸವೂ ಎರಡೂ ಒಮ್ಮೆಗೇ ಆಗಿ, ಬಡವರು ಯಾರ ಹಂಗೂ ಇಲ್ಲದೆ ಬದುಕುವಂತಾಯಿತು. ಶಾಲೆಗೆ ಸಂಬಂಧಿಸಿದ ಯಾವ ಕೆಲಸಗಳಿಗಾದರೂ ಪ್ರತ್ಯೇಕ ಆಳುಗಳು ಅವನಿಗೆ ಬೇಕಾಗಿರಲಿಲ್ಲ. ಎಂತಹ ಗೌರವ... ...ದ ಎಷ್ಟು ಕೀಳುಗೆಲಸಕ್ಕೂ ಆತನು ಅವಮಾನವೆಂದೆಣಿಸಿ ಹಿಂಜರಿದವನಲ್ಲ. ಕೆಲಸ ಮಾಡುವುದೊಂದು ಭೂಷಣವೆಂದೇ ಆತನ ತಿಳಿವು. ಆತನು ತಾನೆ ಸ್ವಯಂ ಹಾ... ...ಡಿದು, ಊರು ತಿರುಗಿ ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡಿದನು. ಕಡುಸಾಧನೆ...ದ ಇಟ್ಟಿಗೆಗಳನ್ನು ಮಾಡುವ ಕ್ರಮವನ್ನರಿತು, ಸಾವಿರಾರು ಇಟ್ಟಿಗೆಗಳನ್ನು ...ಸಿದನು. ಮರಕೆಲಸ ಕಬ್ಬಿಣಗೆಲಸಗಳೂ ಅವನ ಶಾಲೆಯಲ್ಲಿ ನಡೆದುವು. ಬಂದ ಧನವೆಲ್ಲವೂ ಪರೋಪಕಾರಕ್ಕಾಗಿಯೇ ಸವೆದುವು. ಹೆಚ್ಚು ಮಾತೇಕೆ? ಅವನು ಸ್ವ...ಯಿಂದ ಬದುಕುವುದೇ ಸ್ವರ್ಗಲೋಕಕ್ಕೆ ಸಮಾನವೆಂಬುದನ್ನು ಕಾರ್ಯತಃ ಜ...ು, ಬಡ ನೀಗ್ರೋ ಜನರನ್ನು ಕಡೆಗಣ್ಣಿಂದ ನೋಡುವ ಬಿಳಿ ಜನರಿಗಿಂತಲೂ ಒಂದಡಿ ಮುಂದಕ್ಕೆ ಬರುವಂತೆ ಮಾಡಿದನೆಂದರೆ ಅತ್ಯುಕ್ತಿಯಲ್ಲ!

ಇಷ್ಟೇ ಅಲ್ಲದೆ ಆತನು ಬಡ ಬಾಂಧವರನ್ನು ಉದ್ಧರಿಸುವ ಕಾರ್ಯಸಾಧನೆಗಾಗಿ ಹಲವು ಊರುಗಳನ್ನು ತಿರುಗಿ, ಹಲವೆಡೆಗಳಲ್ಲಿ ಹಲವು ಮೇಲಾದ ಉಪನ್ಯಾಸಗಳನ್ನು ಮಾಡಿ, 'ಜಸವೆಡೆದವಾಗ್ಮಿ'ಯೆನಿಸಿಕೊಂಡನು.

ಹೀಗೆ ಆತನು ೧೨ ವರ್ಷಗಳ ವರೆಗೆ ನಿದ್ರಾಹಾರಗಳಲ್ಲಿ ಅಕ್ರಮನಾಗಿ, ಸದಾ ಸದ್ಯುದ್ಯೋಗನಿರತನಾಗಿ..., ಅವನ ಆರೋಗ್ಯವು ಕೆಡಬಹುದೆಂಬ ಭಯದಿಂದ ಅವನ ಹಿತಚಿಂತಕರಾದ ಕೆಲವು ಮಂದಿ ಸೇರಿ ಸನ್ ೧೮೯೯ನೇ ಮೇ ೧೦ ತಾರೀಖಿನಲ್ಲಿ ಯೋಗ್ಯವ್ಯವಸ್ಥೆಯಿಂದ ...ತ್ತಾಯಮಾಡಿ ಅವನನ್ನು ಯುರೋಪ್ ಖಂಡಕ್ಕೆ ಕಳುಹಿಸಿದರು. ೧೦ ದಿನಗಳ ಕಡಲಪಯಣದಿಂದ ಅವನಿಗೆ ಅಭೂತಪೂರ್ವವಾದ ಆರೋಗ್ಯ ಭಾಗ್ಯವು ಲಭಿಸಿತು. ...ರ್ಾಂ, ಹೇಗು, ಬೆಲ್ಜಿಯಂ, ಹಾಲೆಂಡ್, ಇಂಗ್ಲೆಂಡ್ ಮುಂತಾದ ಮಹಾ ಮಹಾ ಪಟ್ಟಣಗಳ ದರ್ಶನಲಾಭವಾಯಿತು. ೩೦೦ ದೊಡ್ಡ ಮನುಷ್ಯರು ಅಲ್ಲಿ ಆತನಿಗೆ ಔತಣವಿತ್ತರು. ಹೀಗೆ ಸಂಭ್ರಮದಿಂದ ಕೆಲವು ದಿನಗಳಾದ ಮೇಲೆ ಅವನು ಅಮೇರಿಕಾ ಖಂಡಕ್ಕೆ ಮರಳಿದನು.

ಬಡವರಿಂದಲೇ ಮಹತ್ಕಾರ್ಯವಾಗಬಹುದಲ್ಲದೆ, ತಿಂದು ತೇಗಿ ಹರಟೆ ಹೊಡೆಯುವ ಲಕ್ಷಾಧೀಶರಿಂದ ಅದೆಷ್ಟು ಮಾತ್ರಕ್ಕೂ ಆಗದು!

(೪ನೇ ಪುಟದಿಂದ ಮುಂದರಿಸಿದ್ದು.)

ಜೀವವೂ ಉಳಿದಿದ್ದಿಲ್ಲ. ಅವಳು ಕಕ್ಕಾಬಿಕ್ಕಿಯಾಗಿ ಗೋಳಿಡುತ್ತಿದ್ದಂತೆ—ಅವನ ಕೈಕಾಲುಗಳು ತಣ್ಣಗಾದುವು. ಹಾ ಮೃತ್ಯು! ನಿನ್ನಂತಹ ವೇಗದಿಂದಾರು ಕೆಲಸ ಮಾಡಬಲ್ಲರು?

\+ × + × +

ಸಂಜೆಯಾಯಿತು—ಕತ್ತಲಾಯಿತು. ರಾತ್ರೆ ೯ ಘಂಟೆ ದಾಟಿದೆ ಮಾತ್ರ—ಧನಿ ಪುಂಡರೀಕ ಪಂಡಿತರು ಸದಾರಮೆಯ ಮನೆಯಂಗಳಕ್ಕೆ ಬಂದು ಯಮನಂತೆ ನಿಂತರು. ವಿ...ತ್ಯದಂತೆ '...! ರಂಗಪ್ಪಾ' ಎಂದು ಕರೆದರು . . . . ಬಾಗಿಲು ತೆರೆಯಲ್ಪಟ್ಟಂತೆ ...ಣಲಿಲ್ಲ. ... ತಟ್ಟಿದರು. ಕೋಪದಿಂದ ಗುಡುಗುಡಿಸಿ ಕರೆದರು—ನಿರುತ್ತರ— ...ಳಿಯ ... ಬಾಗಿಲಿಗೆ ಎರಡು ಒದೆತ!!! ಬಾಗಿಲು ತಟ್ಟನೆ ಮುರಿಯಿತು. ಸದಾ...ೋ... ...ಸುತ್ತಾ ಒಳಹೊಕ್ಕರು. ದೀಪವೊಂದು ಮಿಣಮಿಣನೆ ಉರಿಯುತ್ತಿ..., ... ಹೋದರು. ನೋಡುತ್ತಾರೇನು?—ಭೀಕರ ದೃಶ್ಯ! ರಂಗಪ್ಪನು ನಿಶ್ಚೇತನಾಗಿ ಮಲಗಿದ್ದಾನೆ. ಬಳಿಯಲ್ಲೇ ಚಾಪೆಯ ಮೇಲೆ ಸದಾರಮೆಯು ತಲೆ ಕೆದರಿಸಿ, ಕೈಕಾಲುಗಳನ್ನು ಚಲ್ಲಾಪಿಲ್ಲಿಯಾಗಿ ಎಸೆದು ಮಲಗಿದ್ದಾಳೆ. ಮಕ್ಕಳೆರಡೂ ನಿದ್ದೆ ಮಾಡಿದಂತಿವೆ!

ಪಂಡಿತರ ಹೃದಯದಲ್ಲಿ ವಿಲಕ್ಷಣವಾದ ನಡುಕವುಂಟಾಯಿತು. ಅವರ ಹೃದಯವು ಒಡೆಯಿತು—ಕದಡಿತು. ಹಾಗೆಯೇ ಸದಾರಮೆಯನ್ನು ಕರೆದರು. ಇಲ್ಲ; ಅವಳೇಳಲೊಲ್ಲಳು. ರಂಗಪ್ಪನನ್ನೆಚ್ಚರಿಸುವುದಕ್ಕಾಗಿ ಅವನ ಕೈಯೊಂದನ್ನು ಹಿಡಿದು ಅಲುಗಾಡಿಸಿದರು—ಕರೆದರು. ತತ್‌ಕ್ಷಣ ಹೆಣವೆಂದು ಭಾಸವಾಯಿತು. ಸದಾರಮೆಯನ್ನು ಮುಟ್ಟಿ ಎಬ್ಬಿಸಲೆತ್ನಿಸಿದರು. ಇಲ್ಲ, ಅವಳೂ ಶವ. ಮಕ್ಕಳೂ ಶವ. ಎಲ್ಲರ ಮುಖವೂ ಕರ್‍ರಗಾಗಿ ಹೋಗಿತ್ತು. ಪ್ರಾಣಹತ್ಯೆ! ಪ್ರಾಣಹತ್ಯೆ!! ಎಂದು ಪಂಡಿತರು ಬಾಯಿಯೆತ್ತುವಷ್ಟರಲ್ಲಿ ವಿಷದ ಪಾತ್ರೆಯೊಂದು ಕವಚಿಬಿತ್ತು. ವಿಷ!! ವಿಷ!!

ಪಾಠಕ! ಅದೊ ನೋಡಿರಿ. ಕೋರ್ಟಿನಲ್ಲಿ ಪುಂಡರೀಕ ಪಂಡಿತರ ವಿಚಾರಣೆಯು ನಡೆಯುತ್ತಿದೆ. ಕೊಲೆಯ ಆರೋಪವು ಹೇಗೋ ಅವರ ಮೇಲ್ಬಿದ್ದಿದೆ.

ಕಡಲೆ ಕಾಳು ಪ್ರಮಾಣದಲ್ಲಿ ಸೈಂಧವಲವಣವನ್ನು ಬಾಯಿಯಲ್ಲಿ ಹಾಕಿಕೊಂಡು ನೀರನ್ನು ನುಂಗಿದರೆ ಅಜೀರ್ಣಕ್ಕೆ ಒಳ್ಳೇಯದು.


His Message.

By Sadhu Shiva Prasad.

(S[illegible] written for Badavara Bandhu.)

I have been a seeker after Truth from more than twenty years. I have visited the sacred shrines of holy Bharatavarsha as a itinerant mendicant. One of my greatest passions was to see the mighty Himalayas, and Sree Kailas, the abode of the Lord of Yogis, Shiva-shanker. The crystal waters, the beautiful murmuring rivers, the snowy mountains kissing the skies, the laughing flowers, and the dark thick forests inspired and made me bow down in reverence to the one God, the Creator, the Preserver, and the Destroyer of man. The whole world to me became consecrated, a veritable temple of the All-pervading God, Brahman. Men and women became flowers of different hues to me, and I saw amidst them some flowers of ineffable beauty whose fragrance filled me with reverence and awe and I fell at their feet with tears in my eyes, and I praised the Lord, for I have been at the feet of moving temples of God.

Sree Narayan Paramahamsa of blessed memories was such a holy flower, sent down to this earth by the Redeemer of the Nations to uplift the down-trodden, the distressed, the lowest and lost with the charm of his holy fragrance. Though that flower has already been taken to the footstool of God, yet its fragrance still wafts in air, most and specially on the West Coast of this Motherland. This mission of Peace, and Goodwill unto all mankind is the p[illegible]cia for all the ills of the day. The warring creeds, with their obnoxious caste distinctions, distend pollutions, touch-me-notisms, and the religious fanat[illegible]m have been sucking the blood [illegible]e children of the West Coast, nay, the whole of this beautiful Motherland. And the bugle-call of the Swami with his clarion voice, ringing out in wonderful melody rouses the Youth of the West Coast to a mission of wonderful potantialities, the mission of purity, love and tolerance which though in its infancy has been still performing miracles in the sacred land. I have at last come face to face with Truth from the feet of the Holy Mahatma, who inspired into my ears the sacred munthra of "Om tattwam asy". It was in the year 1912 that I received this initiation at his hands and from that day I have been working ceaselessly among my sisters and brothers, caring not for their differences in creeds and their denominations, their faiths and ideals. To me all Samajas and Churches and Temples are holy because, to me all roads lead to Rome-the citedal of Eternal Peace and Happiness. I have therefore, no faith in warring creeds. I bow before all the great teachers, Buddha, Krishna, Christ, Zoroaster and Mohamed; and religions—I regard—as the branches of the same Eternal Divine Tree, the Tree of Supreme Brah[illegible]idya. I am only a humble servant of the holy children of God, Harijans and Nayadees. I regard as the most innocent and supreme ones, the victims of caste-tyranny and cruelty of the selfish monsters of priestcraft and Brahmindom. May the Lord who is working through Mahatma Gandhi, the greatest son of India at this special juncture, bless one and all and prepare the hearts of the teaming millions to accept the glorious message of Sree Narayan Paramahamsa, the Dharma of one God, one Religion and one Humanity.



ಸಾಯಲೇ ಬದುಕಲೇ?

ಲೇಖಕರು:—ಶ್ರೀ. ಆರ್. ನಾಗೇಂದ್ರ ರಾವ್, ಜಗಳೂರು.

ಪ್ರಾತಃಕಾಲದ ವೇಳೆ. ಸುಮಾರು ಒಂಭತ್ತು ಹತ್ತು ಘಂಟೆಯ ಸಮಯವಾಗಿರಬಹುದು. ಮದ್ರಾಸಿನ ಭವ್ಯವಾದ ಒಂದು ಹೊಟೆಲಿನ ಕೋಣೆಯೊಂದರಲ್ಲಿ ಓರ್ವ ತರುಣನು ಆರಾಮ ಕುರ್ಚಿ (Easy-chair)ಯ ಮೇಲೆ ಒರಗಿಕೊಂಡು ಎಡಗೈಯಲ್ಲಿ ಸಿಗರೇಟನ್ನು ಸೇದುತ್ತಲೂ, ಬಲಗೈಯಲ್ಲಿ 'ಹಿಂದೂ' ವೃತ್ತ ಪತ್ರಿಕೆಯನ್ನು ಹಿಡಿದುಕೊಂಡು ಏನನ್ನೊ ಓದುತ್ತಲೂ ಇದ್ದನು. ಅಷ್ಟರಲ್ಲಿ ಟಪ್ಪಾಲು ಪೇದೆಯು ಒಳಗೆ ಬಂದು, "ಮಿಸ್ಟರ್ ಎಚ್. ಮೋಹನ ರಾವ್, ಬಿ. ಎ. ಲಾ ಕೊಲೇಜು" ಎಂದೆನ್ನುತ್ತಾ ಒಂದು ಪತ್ರವನ್ನು ಮೇಜಿನ ಮೇಲಿಟ್ಟು ನಡೆದನು. ಮೋಹನರಾಯನು ಪತ್ರವನ್ನು ತೆಗೆದು ತಟ್ಟನೆ ಒಡೆದನು. ಅದರಲ್ಲಿ "ಬೆಂಗಳೂರು, ತಾ.—ಪ್ರಾಣಕಾಂತಾ, ಇಲ್ಲಿ ನಿಮ್ಮ ಮದುವೆಯ ಸಿದ್ಧತೆಯಾಗುತ್ತಿರುವುದನ್ನು ನೋಡಿ ನನಗೆ ಭಯವುಂಟಾಗಿದೆ. ನಮ್ಮ ನೆರೆಯ ರಾಮಣ್ಣನವರ ಪುತ್ರಿ ಕಮಲಾಕ್ಷಿಯನ್ನು ನಿಮ್ಮ ಮಾವನವರು ನಿಶ್ಚಯಮಾಡಿದ್ದಾರೆ. ಅಯ್ಯೋ! ಹುಡುಗಿಯ ರೂಪವೇ! ಹಂದಿಗಿಂತಲೂ ಕಡೆ! ನೋಡಿದರೆ ಗೊತ್ತಾದೀತು. ಅದರಲ್ಲೂ ತೀರಾ ಬಡವರು. ನಿಮ್ಮ ಮನಸ್ಸು, ಹೇಗಿದೆಯೋ ತಿಳಿಯದು.........ಕೂಡಲೇ ಉತ್ತರ ಬರೆಯಿರಿ. ಇಂತೀ, ಲಲಿತಾ ಬಾಯಿ" ಎಂದಿತ್ತು.

ದಶಂಬರ ರಜೆಯಲ್ಲಿ ಮೋಹನ ರಾಯನು ಬೆಂಗಳೂರಿಗೆ ಬಂದನು. ಮಾವನು ತನ್ನ ಮದುವೆಯನ್ನು ಮುಂದೊತ್ತುವುದನ್ನು ಕಂಡು ಅವನಿಗೆ ಆಶ್ಚರ್ಯವೆನಿಸಲಿಲ್ಲ. ಅದರ ಬದಲಿಗೆ ಆ ವಿವಾಹವು ನೆರವೇರಬೇಕೆಂದೇ ಅವನು ಇಚ್ಛಿಸಿದ್ದಂತೆ ಕಂಡುಬರುತ್ತಿತ್ತು. ಅವನ ಮನೋಭಾವವೂ ಪರಿಸ್ಥಿತಿಯೂ ಹೇಗಿತ್ತೆಂದು ಅವನು ಲಲಿತೆಗೆ ಬರೆದ ಇದೊಂದು ಪತ್ರದಿಂದಲೇ ತಿಳಿಯಬಹುದು.

"—ಪ್ರಿಯೆ, ನಿನ್ನ ಕಾಗದಗಳು ತಲಪಿವೆ. ನಾನು ನನ್ನ ಲಾ ವ್ಯಾಸಂಗವನ್ನು ಮುಗಿಸುವ ತನಕ ಏನಾದರೊಂದು ಉಪಾಯದಿಂದ ದಿನಹರಣೆಮಾಡಬೇಕಾಗಿದೆ. ನನ್ನ ವಿದ್ಯೆಗಾಗಿ ಮುಂದಕ್ಕೆ ತಾನು ವೆಚ್ಚಮಾಡಲಾರೆನೆಂದು ಮಾವನವರು ನ[illegible] ತಿಳಿಸಿರುತ್ತಾರೆ. ಹೇಗೋ ಮಾಡಿ ವಿವಾಹಮಾಡುವುದರಲ್ಲಿದ್ದಾರೆ. ವಧುವಿ[illegible] ಯವರಿಗೆ ಇರುವ ಒಂದು ತುಂಡು ಆಸ್ತಿಯನ್ನಾದರೂ ಮಾರಿ ನನಗೆ ವಿದ್ಯೆಗ[illegible]ತ್ತಾರೆಂದು ಭಾಷೆ ಕೊಟ್ಟಿದ್ದಾರಂತೆ. ವಧುವಿನ ತಂದೆಗೆ ತನ್ನ ಅಳಿಯನು ಸ[illegible]ನಾಗಲೇಬೇಕೆಂದು ಬಹಳ ಹಂಬಲವಂತೆ. ಏನೂ ಇರಲಿ; ನಿನ್ನನ್ನು ಬಿಟ್[illegible]ಲಾರೆ. ನೀನು ನಿನ್ನ ಪ್ರತಿಜ್ಞೆಗೆ ತಕ್ಕಂತೆ ನಡೆಯಬೇಕು—ನನಗಾಗಿ. ಬೇರಾವ ಉಪಾಯವೂ ನನಗಿಲ್ಲವೆಂದು ನಿನಗೆ ತಿಳಿಸಿರುವೆನು. ಇಂತಹ ವೇಳೆಯಲ್ಲಿ [illegible]ಕಾರ್ಯಸಾಧನೆಗಾಗಿ ಈ ಸುಸಂದರ್ಭದ ಸತ್ಪ್ರಯೋಜನವನ್ನು ಹೊಂದದಿರಲಾಗದ[illegible] ಮೋಹನ ರಾವ್."

ಬೆಂಗಳೂರು ಚೌಕದ ರಾಮಣ್ಣರೆಂದರೆ ಪೂರ್ವದಲ್ಲಿ ಹೆಚ್ಚು ಐಶ್ವರ್ಯವಂತರ[illegible] ಆದರೆ ಈಗ ಮಾತ್ರ ಅವರು ತೀರ ಬಡವರಾಗಿದ್ದಾರೆ. ತಿಂಗಳಿಗೆ ೧೫ ರೂಪಾಯಿ ಪೆನ್ಶನ್ ಸಿಗುತಿದ್ದಿತು. ಅದರ ಸಹಾಯದಿಂದ ತನ್ನ ಹೆಂಡತಿ ಮತ್ತು ಇಬ್ಬರು ಹೆಣ್ಮಕ್ಕಳೊಡನೆ ದಿನಹರಣೆ ಮಾಡುತ್ತಿದ್ದರು. ಪ್ರಥಮ ಪುತ್ರಿಯಾದ ಕಮಲಾಕ್ಷಿಗೆ ವಿದ್ಯಾವಂತ ಗಂಡನನ್ನೇ ತರಬೇಕೆಂದು ರಾಮಣ್ಣನವರ ಅದೊಂದು ಆಶೆ. ಪತ್ನಿಯ ಪಾಲಿಗೆ ಅಲ್ಲಿಯೇ ಇದ್ದ ಒಂದೇ ಒಂದು ತುಂಡು ಬಂಜರು ಭೂಮಿಯನ್ನಾದರೂ ಮಾರಿ ಒಳ್ಳೆಯ ಹುಡುಗನನ್ನು ಮಗಳಿಗೆ ಪಡೆಯಬೇಕೆಂದು ಅವರು ನಿರ್ಧರಿಸಿದ್ದರು. ಮುಂದಕ್ಕೆ ಅಳಿಯನು ಒಳ್ಳೆಯವನಾದರೆ ತನಗೆ ಹೆಚ್ಚಿನ ಪ್ರಯೋಜನವಾದೀತೆಂದೂ, ಏಕೆ, ಅವನು ತನ್ನ ಸಂಸಾರರಥಕ್ಕೆ ಚಕ್ರದಂತಾಗಲೂ ಬಹುದೆಂದು ಅವರು ಊಹಿಸಿದ್ದರು. [illegible]ರು ದೂರದೃಷ್ಟಿಯವರಲ್ಲ. ಎಲ್ಲವೂ ತಾನೆಣಿಸಿದಂತೆಯೇ ಆಗುವುದೆಂದು ಅವರು ನೆನಸುವರು. ಇಂತಹ ಒಂದು ಚಾಳಿಯಿಂದಾಗಿಯೇ ಅವರು ಈಗಿನ ದುಃಸ್ಥಿತಿಗಿಳಿದಿ[illegible]. ಎಷ್ಟು ಹಣವಿದ್ದರೂ ಸರಿ, ಅವರಿಗೆ ಅದನ್ನು ಕೂಡಲೇ ವೆಚ್ಚಮಾಡಿಯೇ [illegible]ಬೇಕು. ಮುಂದಿನದು ಮುಂದಕ್ಕೆ! ಅದರಲ್ಲೂ ಅವರ ದೊಡ್ಡಸ್ಥಿಕೆಯು ವಿಪರೀತ! [illegible] ಕಾಸಿಲ್ಲದಿದ್ದರೂ, ಬಾಹ್ಯಕ್ಕೆ ಮಾತ್ರ ಸಾವಿರ ಗಂಟು ಕಟ್ಟಿಟ್ಟಿದ್ದೇನೆಂದೇ ತೋರಿಸಲೆ[illegible]ಸುತ್ತಿದ್ದರು. ಇಂತಹವರ ಬಲೆಗೆ ಮೋಹನರಾಯನೂ, ಅವನ ಮಾವನೂ ಬಿದ್ದು[illegible] ವಿಚಿತ್ರವೇ?

ಮೋಹನ[illegible] ಕಮಲಾಕ್ಷಿಯರ ವಿವಾಹವು ನಡೆದೇ ಹೋಯಿತು. ಒಂದೆರಡು ತಿಂಗಳುಗಳು ದಾಟುತ್ತಲೇ ಮೋಹನನು ಪುನಃ ಎರಡನೇ ವರ್ಷದ ಲಾ ಕಲಿಯಲು ಮದ್ರಾಸಿಗೆ ಹೋದನು.

ಮೋಹನನೆಂದರೆ ತಾಜಾ ದ್ರವ್ಯಮೋಹನ. ಕೈಗೆ ಎಷ್ಟು ಹಣ ಬಂದರೂ ಅವನ ಜೇಬಿನಲ್ಲೊಂದು ಚಿಕ್ಕಾಸಿಲ್ಲ! ದಿನಕ್ಕೆರಡು ಮೂರು ಪೆಕೆಟುಗಳು ಗೋಲ್ಡ್ ಫ್ಲೆಕ್ ಸಿಗರೇಟೂ, ಹತ್ತಿಪ್ಪತ್ತು ಬ[illegible]ಯ ಮಡಿ ಮಡಿ ಸೂಟುಗಳೂ ಎರಡು ದಿನಕ್ಕೊಮ್ಮೆಯ ನಾಟಕ ಸಿನೆಮಾ ಮಂದಿರ[illegible] ತಿಂಗಳೊಂದಕ್ಕೆ ಅವನ ಕೈಯಿಂದ ನೂರು ರೂಪಾಯಿಗಳಿಗಿಂತಲೂ ಹೆಚ್ಚಿನದನು [illegible]ನುಂಗಿಬಿಡುತ್ತಿದ್ದುವು. ಇಂತಹ ಕುತಂತ್ರಿ ಇಲ್ಲ! ಅದರಲ್ಲೂ ಊರಿನಲ್ಲಿರುವಾಗಲೇ ಲಲಿತಬಾಯಿಯ ಪ್ರೇಮಪಾಶಕ್ಕೆ ಕಟ್ಟಲ್ಪಟ್ಟಿದ್ದವನು, ಕೇಳಬೇಕೆ? ಅವನ ಆಟ[illegible]ಲಾಟಗಳಿಗೆ! ಈ ಹೊತ್ತು ಒಂದು ಒಳ್ಳೇ ಟೆನ್ನಿಸ್ ರೆಕೆಟನ್ನು ನೋಡಿದರೆ, ಮೊ[illegible]ನದ್ದನ್ನು ಮೂಲೆಗೆ ಹಾಕಿ, ಮರುದಿವಸ ಮುಂಚಿನ ದಿನ ಕಂಡದ್ದನ್ನು ಪಡೆಯುವನು. ಇತ್ಯಾದಿ, ಇತ್ಯಾದಿ.

ಹೊಸ ಅಳಿಯನಿಗೆ ಹಣವನ್ನು ಪದೇ ಪದೇ ರವಾನಿಸಿ ರಾಮಣ್ಣನವರ ಪತ್ನಿಯ ಅದೊಂದು ತುಂಡು ಆಸ್ತಿಯುಂತೂ ಮಾರಿ ಹೋಯಿತು. ಆದರೂ ಸಹಿಸಿಕೊಂಡು ಕೆಲವು ಮಿತ್ರರಿಂದ ಸಾಲಪಡೆದು, ತನ್ನ ಬಾಹ್ಯ ಡಂಭವನ್ನು ಕಾಯ್ದುಕೊಳ್ಳುವುದಕ್ಕಾಗಿ ಮತ್ತೂ ಒಂದೆರಡು ತಿಂಗಳುಗಳ ತನಕ ಹಣವನ್ನು ರವಾನಿಸಿದರು.

ಈಗ ರಾಮಣ್ಣನವರ ಡಂಭದ ಪಿತ್ತವು ಕೆಳಗಿಳಿಯಿತು. ಕೈಯಲ್ಲಿ ತಾಮ್ರದ ತುಂಡೂ ಇರದಂತಾಯಿತು. ಪತ್ನಿಯ ಕೆಲವು ಆಭರಣಗಳೂ ಮಾರಾಟವಾಗಿ ಹೋದುವು. ಮನೆಯಲ್ಲೇ ಇದ್ದ ಕಮಲಾಕ್ಷಿಯ ಕೆಲವು ಸಣ್ಣ ನಗಗಳೂ ಸರಾಫ್ ಕಟ್ಟೆಗೆ ಆಹುತಿಯಾಗಿ ಹೋದುವು. ಇಷ್ಟಾದರೂ ಮೋಹನ ರಾಯನ ಬೇಲುಗಳು ಕಡಿಮೆಯಾಗಲಿಲ್ಲ, ಹಣದಡಚಣೆಯು ತಪ್ಪಲೇ ಇಲ್ಲ. ಅವನ ಕೋರ್ಸ್ (Course) ಪೂರ್ಣವಾಗಲೂ ಇಲ್ಲ. ಅವನು ಊರಿಗೆ ಹಿಂತಿರುಗಲೇ ಇಲ್ಲ.

ರಾಮಣ್ಣನವರು ಈಗ ಮಾತ್ರ ಅಳಿಯನಿಗೆ ತನ್ನ ಪ್ರಕೃತದ ಬಡಸ್ಥಿಕೆಯ ವಿ[illegible]ತು ಒ[illegible]ದವನ್ನು ಬಿಟ್ಟರು. ಅವರ ಕಷ್ಟವನ್ನು ಮೋಹನನೆಂತು ತಿಳಿ[illegible]ನು? ಒಂ[illegible]ನಗಳು ಕಳೆಯುತ್ತಲೇ ರಾಮಣ್ಣನವರಿಗೆ ಮದ್ರಾಸಿನಿಂದೊಂದು ಪತ್ರವು [illegible]ನನ್ನ ವಿದ್ಯಾವ್ಯಾಸಂಗವು ಸಂಪೂರ್ಣವಾಗುವ ವರೆಗೆ ಸಹಾಯ ಮಾ[illegible]ನೀವು ಭಾಷೆ ಕೊಟ್ಟಿದ್ದು, ಈಗ ಹೀಗೆ ಮಾಡಿದ್ದನ್ನು ನೋಡಿದರೆ ನಿಮ್ಮ[illegible]ನ್ನಿಟ್ಟುಕೊಳ್ಳಬೇಕೋ ಬಿಡಬೇಕೋ ಎಂದು ಆಲೋಚಿಸುತ್ತಲಿದ್ದೇನೆ—ಅವಳು ಊರಲ್ಲೇ ಇರಲಿ. ಕಳುಹಿಸ ಬೇಡಿ" ಎಂದು ಮೋಹನನು ಬರೆದಿದ್ದನು.

ಮೋಹನನು ಕಲ್ಕತ್ತಾದ ಅತ್ತಕಡೆ ತೆರಳಿ ಇಂದಿಗೆ ಎಂಟು ವರ್ಷಗಳಾದುವು. ಅಲ್ಲಿ ಎಲ್ಲೋ, ಬೆಂಗಳೂರಿನ ಸ್ತ್ರೀಯೊಬ್ಬಳೊಡನೆ ದಿನಹರಣೆ ಮಾಡುತ್ತಿದ್ದಾನೆಂಬ ಸುದ್ದಿಯನ್ನು ಕೇಳಿಯೇ ಕಮಲಾಕ್ಷಿಯು ಜೀವವನ್ನು ಹೊತ್ತಿದ್ದಾಳೆ. ಮನೋವ್ಯಾಕುಲತೆಯ ದಾವಾಗ್ನಿಯಿಂದ ಬೆಂದು ಬೆಂಡಾಗಿ ಅವಳ ದೇಹವು ಕಡ್ಡಿಯಂತಾಗಿದೆ. ಒಂದು ಕಡೆಯಿಂದ ತಂದೆಯು ತೀರಿಕೊಂಡ ದುಃಖ! ಮತ್ತೊಂದು ಕಡೆಯಿಂದ ಅವಿವಾಹಿತ ತಂಗಿಯು ಇನ್ನೂ ಮನೆಯಲ್ಲೇ ಇದ್ದು, ಸಮಾಜದ ದೂಷಣೆಯು ವಿಪರೀತವಾಗುವ ವ್ಯಸನ; ಇನ್ನೊಂದು ಕಡೆಯಿಂದ ಮೃತ್ಯುವನ್ನೇ ಎದುರುನೋಡುತ್ತಿರುವ ತಾಯಿಯ ದುರವಸ್ಥೆಯನ್ನು ಕಂಡು ವ್ಯಾಕುಲ, ಮಗುದೊಂದು ಕಡೆಯಿಂದ ಗಂಡನೆಂಬವನು ಪರಸ್ತ್ರೀಯೊಡನೆ ಹೋದ ವ್ಯಥೆ—ಸಾಯಲೇ ಬದುಕಲೇ?

ಇದಕ್ಕೆ ಕಾರಣರಾರು? ಬಡವನಾಗಿದ್ದರೂ ಡಂಭವನ್ನು ತೋರಿಸಿ, ವಿದ್ಯಾವಂತ ಅಳಿಯನಾಶೆಯಿಂದ ಬಳಲಿದ ರಾಮಣ್ಣರು.

ಭೋಜನವಾದ ಕೂಡಲೇ ಹಲ್ಲುಸಂದುಗಳಲ್ಲಿ ತಿಂದ ಆಹಾರಕಣಗಳು ಸೇರದಂತೆ ಬಿಸಿನೀರಿನಲ್ಲಿ ಉಪ್ಪನ್ನು ಸೇರಿಸಿ ಚೆನ್ನಾಗಿ ಬಾಯಿಮುಕ್ಕಳಿಸಬೇಕು.

ಸ್ವೀಕಾರ ವಿಮರ್ಶೆ.

ಕೀರ್ತನಾಂಜಲಿ:— (ಪ್ರಥಮ ಭಾಗ) ರಚಯಿತರು, ಜಿ. ಎನ್. ಲಕ್ಷ್ಮಣ ಪೈ, ಪುತ್ತೂರು. ಪ್ರಕಾಶಕರು ಹರಿಹರ ಛಾಪಖಾನೆ, ಪುತ್ತೂರು. ಕ್ರಯ ಮೂರಾಣೆ.

ಶ್ರೀಯುತ ಜಿ. ಎನ್. ಲಕ್ಷ್ಮಣ ಪೈಗಳು ಈ ಕೃತಿಯ ಯ ಮುದ್ರಣದ ಪದವಿಗೇರಿದುದನ್ನು ನೋಡಿ ನಾವವರನ್ನು ಅಭಿನಂದಿಸದಿರೆವು. ಇವರ ಕೀರ್ತನಾಂಜಲಿಯು ಶ್ರೀ. ಗೋವಿಂದ ಪೈ, ಪ್ರಾಕ್ತನ ವಿಮರ್ಶೆವಿಚಕ್ಷಣ ರಾವ್ ಬಹದ್ದೂರ್ ಶ್ರೀ. ರಾ। ನರಸಿಂಹಾಚಾರ್ಯ್ಯರ್. ಶ್ರೀ. ಮಾಸ್ತಿ ವೆಂಕಟೇಶ ಐಯಂಗಾರ್ ಮೊದಲಾದ ಕನ್ನಡ ವಾಙ್ಮಯ ಪ್ರಭುಗಳಿಂದಲೂ, ದಿ ಹಿಂದೂ, ಜಯಕರ್ನಾಟಕ, ಸತ್ಯವಾದಿ, ಸ್ವದೇಶಾಭಿಮಾನಿ, ಮೊಡರ್ನ್ ರಿವ್ಯೂ, ವಿಶ್ವಕರ್ನಾಟಕ, ಕಂಠೀರವ, ಸ್ವಧರ್ಮ ಮೊದಲಾದ ಪ್ರಸಿದ್ಧ ಪತ್ರಿಕೆಗಳಿಂದಲೂ. ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ವ ಪದ್ಯಗಳನ್ನು ಓದುವಾಗ ‹ದಾಸರಪದ›ಗಳೂ ಸ್ಮೃತಿಪಥಕ್ಕೆ ಬರುತ್ತವೆ. ಈ ಕವಿಗಳು ಪ್ರಕೃತಿ ಸೌಂದರ್ಯ, ಅಥವಾ ಅವ್ಯಕ್ತ ತತ್ವಗಳ ಜೀವನ ಪಥವನ್ನು ಹಿಡಿಯದೆ, ಭಗವಂತನ ನಾಮ ಸ್ಮರಣಾ ಮಾರ್ಗವಾಗಿ ಮುಂದರಿಯುತ್ತಿದ್ದಾರೆ. ಆಧು ಕ್ರಮದ ಪದ್ಯಗಳೂ ಇದರಲ್ಲಡಕವಾಗಿವೆ. ಶ್ರೀಹರಿ ಮಾತೃಕಾಮಲಾ ಸ್ತೋತ್ರವು ಭಕ್ತಿಭಾವಗರ್ಭಿತವಾಗಿದೆ. ಇದನ್ನು ಪ್ರತಿಯೊಬ್ಬ ಕನ್ನಡಿಗನೂ ಓದಿ, ಮನನಮಾಡಿ, ಶ್ರೀಯುತರನ್ನು ಪ್ರೋತ್ಸಾಹಿಸಬೇಕಾಗಿದೆ. ಪುಸ್ತಕದ ಸೌಂದರ್ಯವು ಪುತ್ತೂರಿನ ಹೆಸರನ್ನು ಮುತ್ತೂರು ಎಂದು ಪ್ರಸಿದ್ಧಿಸುವಂತಿದೆ.ಇದನ್ನು ಇಷ್ಟು ಅಂದವಾಗಿ ಮುದ್ರಿಸಿದ ಹರಿಹರ ಛಾಪಖಾನೆಯವರು ಸಂಪೂರ್ಣ ಪ್ರಶಂಸೆಗೆ ಅರ್ಹರಾಗಿರುವರು.

ಗಾಂಧಿ ಚರಕ:— ಲೇಖಕರು—ಶ್ರೀ. ಶ್ರೀನಿವಾಸ ನಾರಾಯಣ ಪೈ, ಉಡುಪಿ, ಇವರು. ಗಾಂಧಿಜಯಂತಿಗಾಗಿ ಅಲ್ಲಿಯ ಖಾದಿನಿಲಯದಿಂದ ಪ್ರಕಟೀಕೃತವಾಯಿತು. ಕ್ರಯ (?) ಶ್ರೀ. ಪೈಗಳ ಸಾಧನೆಯು ಸ್ತುತ್ಯವಿರುತ್ತದೆ. ಇದರ ರಚನೆಯಿಂದ ಕರ್ಣಾಕದ ಸ್ವದೇಶೀಪ್ರಚಾರ ಕಾರ್ಯಕ್ಕೆ ಅತ್ಯುಪಯುಕ್ತ ನೆರವು ದೊರೆದಂತಾಗದಿರದು. ಈ ಚಿಕ್ಕ ಹೊತ್ತಗೆಯನ್ನು ಸಮಸ್ತ ಕನ್ನಡಿಗರೂ ತಮ್ಮದಾಗಿ ಮಾಡಿಕೊಳ್ಳಲಿ.

ಹೊನ್ನಮರಡಿ ಮಲ್ಲನ ಗೌಡರ ಕೃತಿಗಳು

೧. **ಆಯ್ದ ಹೂಗಳು:—** ಪ್ರಕಾಶಕರು ಸರಸ್ವತಿ ಕ ಬೆಂಗಳೂರು ಸಿಟಿ. ಕ್ರಯ ಮೂರಾಣೆ. ಇದು ಮಲ್ಲನ ಗೌಡರ ಕೆಲವು ಚಿತ್ರ ಸ್ವಹ ಪುಸ್ತಕ. ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯನವರೂ " ದ ಕರಾದ ಶ್ರೀಮತಿ ಆರ್. ಕಲ್ಯಾಣಮ್ಮರೂ ಮುನ್ನುಡಿ ಬರೆದಿದ್ದಾರೆ. ಇದರಲ್ಲಿ ಸ್ವಾತಂತ್ರ್ಯ ಗೀತೆಗಳು ತುಂಬಿಕೊಂಡಿವೆ. ಗಾಂಧಿಸ್ತುತಿ, ಜವಾಹರಲಾಲ ಸುತ್ತಿಗಳು ಇದರಲ್ಲಿವೆ. ಮಹಾತ್ಮಾಜೀಯವರ ಕೋಲಿನ ಪದದಲ್ಲಿ "ನಮ್ಮ ಕನ್ನಡ ಚಂದ ನಮ್ಮ ಕವಿಗಳು ಚಂದ। ಹೊನ್ನಮರಡಿ ಮಲ್ಲನ ಪದ ಬಹು ಚಂದ। . . . ‹ಭಾರತನ ಪೊರೆಯಾ ಶಿವನೆ› ಎಂಬ ಪದ್ಯದಲ್ಲಿ "ಹೊನ್ನಮರಡಿ ಕವಿಯು ಮಲ್ಲಾ" ಎಂಬುದನ್ನು ಇವರು ಅನಗತ್ಯವಾಗಿ ಆತ್ಮಸಂತೋಷದಿಂದ ಸೇರಿಸಿ, ಇಡೀ ಕವಿತಾ ಸಂಗ್ರಹಕ್ಕೆ ಒಂದು ಕೆಂಪು ಗೀಟು ಎಳೆದಂತಾಗಿದೆ. ‹ತಾಯಿ ಮಕ್ಕಳ ಸಂವಾದ›ವೊಂದು ಬಹಳ ಸ್ವಾರಸ್ಯವನ್ನೊಳಗೊಂಡಿದೆ.


೨. **ಕಮಲಾ:—** ಸಮಾಜದ ಕುಂದುಕೊರತೆಗಳನ್ನು ಹೊರಗೆಡಹುವ ಕಥೆ ಪುಸ್ತಕ. ಬೆಲೆ ನಾಲ್ಕಾಣೆ. ಬೆಲೆಯು ಹೆಚ್ಚಾಗಿರದಿದ್ದರೆ ಪ್ರತಿಯೊಬ್ಬನೂ ಓದಲನುಕೂಲವಾಗುತ್ತಿತ್ತು.

ಮಾತ್ಸರ್ಯ ಅಥವಾ ಕಳವಾದ ಆಭರಣ:— ಲೇಖಕರು ಶ್ರೀ. ಎಚ್. ಆರ್. ಸ್ವಾಮಿ, ಕ್ರಯ ನಾಲ್ಕಾಣೆ. ಶ್ರೀ. ಚನ್ನ ಕೇಶವ ಪ್ರಸನ್ನ ಪುಸ್ತಕ ಮಾಲೆ ೧ನೇ ಗುಚ್ಛ—ಮಾತ್ಸರ್ಯ ಪ್ರೇರಿತಳಾದ ಸ್ತ್ರೀಯೊಬ್ಬಳು ಎಂತೆಂತಹ ಹೇಯ ಕಾರ್ಯಗಳನ್ನು ಮಾಡಿದಳು; ಮಾತ್ಸರ್ಯವೆಂದರೆ ಮಾನವನ ಜೀವನ ಮಾರ್ಗದಲ್ಲಿ ಎಂತೆಂತಹ ದುಸ್ತರ ದುರಂತವಾದ ಕಷ್ಟಸಂಕಷ್ಟಗಳನ್ನು ತಂದೊಡ್ಡುತ್ತದೆಂದು ಬೆರಳೊಡ್ಡಿ ತೋರಿಸುವ ಕಥೆ. ಭಾವವು ಕಡಿಮೆಯಾಗಿರುವುದಾದರೂ ಇದರಲ್ಲಿ ಕಥಾವಸ್ತುವು ತುಂಬಾಯಿದೆ. ಶುದ್ಧಾಶುದ್ಧ ಪತ್ರಿಕೆಯನ್ನು ೪೦ ಪುಟಗಳ ಈ ಪುಸ್ತಕದಲ್ಲೂ ಕೊಡಬೇಕಾದ ಅಗತ್ಯವನ್ನು ನೋಡುವಾಗ—ಕನ್ನಡ ಮುದ್ರಣ ಕಾರ್ಯವು ಈ ಸಂಸ್ಕೃತ ದಿನದಲ್ಲೂ ಅಧೋಗತಿಯಿಂದಿದೆ — ಎಂದು ಕಣ್ಣೀರು ಮಿಡುಕಬೇಕಾಗಿದೆ. ಶ್ರೀ. ಸ್ವಾಮಿಯವರಿಗೆ ಕನ್ನಡ ಮಾತೆಯ ವರವಿರಲಿ!

ವಿಚಿತ್ರನ್ಯಾಯ— ಕರ್ನಾಟಕ ಸಾಹಿತ್ಯ ಸೇವಾ ಮಂಡಲ; ಬೆಳಗಾವಿ ಇವರ ಕೃತಿ. ಬರೆದುದು ‹ವಿಟ್ಠಲಸುತ›. ಕನ್ನಡ ರಾಜ್ಯರಮಾರಮಣ ಕೃಷ್ಣ ದೇವರಾಯನು, ಮುದ್ದಗಲ್ಲು, ರಾಯಚೂರು ಪಠಗಣೆಗಳನ್ನು ವಿಜಾಪುರ ಬಾದಶಹ ಇಸ್ಮಾಯಿ ಆದಿಲಶನಿಂದ ಪಡೆಯಲು ಕಾದಾಡಿದ ಕಥೆಯಿದು. ಗಿರಿಜೆಯ ಶೌರ್ಯವು ಎದೆಯುಬ್ಬಿಸುವಂತಹುದು. ಈ ಐತಿಹಾಸಿಕ ಕಾದಂಬರಿಯು ಪ್ರತಿಯೊಬ್ಬನಿಂದಲೂ ಓದತಕ್ಕದ್ದಿದೆ. ಇಂತಹ ಕಥೆಗಳು ಈ ಒಂದಾಣೆ ಮಾಲೆಯಿಂದ ತಿಂಗಳೊಂದಕ್ಕೆ ೧ರಂತೆ ಹೊರಬೀಳುತ್ತಿವೆ. ವಾ.ಚ. ಕೂಡಿ ೧—೪—೦. ಈ ಮಾಲೆಗೆ ಉಪಯೋಗಿಸಲ್ಪಡುವ ಕಾಗದವು ಸ್ವಲ್ಪ ಉತ್ತಮದ್ದಾಗಿರುತ್ತಿದ್ದರೆ ಹೆಚ್ಚಿನ ನಷ್ಟವಾದೀತೆಂದು ನಾವು ಭಾವಿಸಲಾರೆವು. ಅಲ್ಲದೆ ಅದರಿಂದ ಹೆಚ್ಚಿನ ಪ್ರಯೋಜನವಿದೆಯೆಂದು ಹೇಳದಿರೆವು.

ಪ್ರಾಣಿಬಲಿ ನಿಷೇಧ:— ಸಂಪಾದಕ, ಶ್ರೀ. ಜಿ. ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿ "ವ್ಯಾಖ್ಯಾನ ವಿಚಕ್ಷಣ" ಮೂಡಬಿದ್ರಿ, ಕ್ರಯ ಎರಡಾಣೆ. ಶ್ರೀ. ಜೈನ ವಿದ್ಯಾವರ್ಧಕ ಸಂಘ ಮೂಡಬಿದ್ರೆ, ಇವರು ಪ್ರಕಾಶಕರು. ಸಮಾಜ ಸೇವಾನಿರತ ಸ್ವಸ್ತಿ ಶ್ರೀ. ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು ಮುನ್ನುಡಿ ಬರೆದಿರುತ್ತಾರೆ. ದೀನಜನ ಸೇವಾನಿರತ ಡಿ. ಮಂಜಯ್ಯ ಹೆಗ್ಗಡೆಯವರು 'ಪ್ರಕಾಶಕರ ಸ್ವಾಭಿಪ್ರಾಯ'ವನ್ನು ಬರೆದಿರುತ್ತಾರೆ. ನಮ್ಮಲ್ಲಿ ಪ್ರಾಣಿಬಲಿಯಂತಹ ಘೋರ ಪದ್ಧತಿಯನ್ನು ಶಾಸ್ತ್ರೋಕ್ತವಾಗಿ ನಿರಾಕರಿಸುವ ಪುಸ್ತಕಗಳು ವಿರಳವಿರುವಾಗ ಯುಕ್ತ್ಯಾಗಮ ದೃಷ್ಟಾಂತಗಳನ್ನು ಕೊಟ್ಟು, ಪ್ರಾಣಿಬಲಿ ನಿಷೇಧದ ಅಗತ್ಯವನ್ನು ಪ್ರಚಾರಮಾಡುವ ಇಂತಹ ಉದ್ಗ್ರಂಥಗಳು ಅಗತ್ಯವಿವೆ. ಬಡ ಪ್ರಾಣಿಗಳ ಕಡೆ ನಿರ್ಲಕ್ಷ್ಯಭಾವದಿಂದಿದ್ದು ನಮ್ಮ ಸುಖಕ್ಕೆ ನಮ್ಮ ಕ್ಷೇಮಕ್ಕೆ ಅಥವಾ ಆಟಕ್ಕೆ ಅವುಗಳನ್ನು ಕೊಲ್ಲುವುದೂ, ಹಿಂಸೆಪಡಿಸುವುದೂ ದೇವರ ಹೆಸರಲ್ಲಿ ನ್ನು ವಧಿಸಿ, ನಾವು ಸುಖ ಪಡುವುದೂ ಎಷ್ಟೊಂದು ಮೌಢ್ಯವೆಂದು ಇದರಿಂದ ತಿಳಿಯದಿರದು. ಶ್ರೀ. ಡಿ. ಮಂಜಯ್ಯ ಹೆಗ್ಗಡೆಯವರೂ, ಶ್ರೀ. ಸ್ವಾಮಿ ಇಂತಹ ಗ್ರಂಥಕರ್ತೃಗಳನ್ನು ಪ್ರೋತ್ಸಾಹಿಸುತ್ತಿರುವುದರಿಂದ ಸಮಸ್ತ ಪ್ರಪಂಚ ಮಹಾ ಸೇವೆಯನ್ನು ಮಾಡಿದಂತಾಗಿರುವುದು. "ವ್ಯಾಖ್ಯಾನ ವಿಚಕ್ಷಣ"ರು ಜ್ಞಾನ ವಿಚಕ್ಷಣರೂ ಅಹುದು.

ಬಾಗಲಕೋಟೆಯ ಶ್ರೀಮಾನ್ ನಾಗಪ್ಪ ಅರಳಪ್ಪ, ಅಬ್ದುಲ್‌ಪುರ, ಇವರ ಅಧ್ಯಕ್ಷತೆಯಿಂದ ಜರಗಿದ ದಿ ಕರ್ನಾಟಕ ಚೇಂಬರ್ ಒಫ್ ಕೊಮರ್ಸ್ ಇವರ ವಾರ್ಷಿಕ ಮಹಾ ಸಭೆಯ ವರದಿಯು ಕೆಲವು ತಿಂಗಳ್ಗಳ ಹಿಂದೆ ನಮ್ಮ ಹಸ್ತಗತವಾಗಿರುತ್ತದೆ. ಈ ವಣಿಕ್ ಸಂಘದವರು ವಾಣಿಜ್ಯ ಸಂಬಂಧವಾಗಿ ಮಾಡಿದ ಸುಧಾರಣೆಯು ಶ್ಲಾಘನೀಯವಿದೆ. ಇವರ ದೃಷ್ಟಿಯು ದಕ್ಷಿಣ ಕನ್ನಡದ ಮೇಲೆ ಹರಿದರೆ ಕನ್ನಡ ಮಾತೆಗೆ ಎಷ್ಟೊಂದು ಸಂತೋಷವಿರುತ್ತಿತ್ತು!



ಅರೆವರ್ಷದ ಸ್ಮರಣಾರ್ಥದ ಬಗ್ಗೆ ಪ್ರಕಟಿಸಲ್ಪಟ್ಟ ಒಗಟಿಗೆ ಸಮರ್ಪಕವಾದ ಉತ್ತರವನ್ನಿತ್ತ ಮಹನೀಯರಗಳ ಹೆಸರುಗಳು.

೧. ಶ್ರೀಗಳಾದ ಎಂ. ಎಂ. ಸುವರ್ಣ, ಅಲ್ಲಹಾಬಾದ್ ಬೇಂಕ್ ಬಿಲ್ಡಿಂಗ್ [illegible]ಂಬಾಯಿ. ×೨. ಎ. ಜನಾರ್ಧನ, ಸಾಹುಕಾರ, ಪಾಂಡೇಶ್ವರ, ಮ*. ೩. ಕೆ. [illegible]ರಮಣ; ಬಾರ್ ಎಸೋಸಿಯೇಶನ್; ಮ. ×೪. ಭಾಸ್ಕರ ಪೈ, ಸಿ. ಪಿ. ಸಿ.—[illegible]. ×೫. ಕಿಲ್ಪಾಡಿ ಮಧುಸೂದನರಾವ್, ಜಿ. ಎಚ್. ಸ್ಕೂಲ್—ಮ. ೬. ×ಉದ್ಧಾರ್ಕಾರ್, C/o ಜಾರಪ್ಪ ಮಂಜಪ್ಪ, ಮ. ×೭. ಎಲ್. ಎಸ್. ಉಡುಪಿಕರ, ಕುಮಟಾ, ಉತ್ತರ ಕನ್ನಡಾ. ೮. ಕೆ. ಕೃಷ್ಣಗಟ್ಟಿ, ಮುಖ್ಯೋಪಾಧ್ಯಾಯ, ಕುಡ್ಲು ಎಯಿಡೆಡ್ ಸ್ಕೂಲ್, ಕಾಸರಗೋಡು. ×೯. ಶ್ರೀಮತಿ ತಾರಾಬಾಯಿ, Vth Form, Bd. High School, ಪುತ್ತೂರು. ×೧೦. ಕೆ. ತಿಮ್ಮಪ್ಪ ಪಂಡಿತ, ರಥಬೀದಿ, ಮ. ×೧೧. ಯು. ರಾಮಕೃಷ್ಣ ಮಲ್ಯ, ಕೆನರಾ ಹ್ಯಾ ಸ್ಕೂಲ್—ಮ. ೧೨. ಕೆ. ಟಿ. ಚೆನ್ನಪ್ಪ, Primary Boy's School, ಕಲ್ಯಾಪುರ, ಚಿಕ್ಕಮಗಳೂರು. ೧೩. ಶ್ರೀಮತಿ ಕೆ. ಸುವಾಸಿನಿ ದೇವಿ, Government Training School for Women, ಮ. ೧೪. ಕೆ. ಓಮಯ್ಯ ಶೆಟ್ಟಿ, ಕೆನರಾ ಛಾಪಖಾನೆ ಮ. ೧೫. ಕೆ. ಬಾಬು ಟೈಲರ್, ರಥಬೀದಿ,—ಮ. ೧೬. ಎಸ್. ಎಸ್. ಹೆಬ್ಬಾರ, ಹಡ್ಲೂರ್, ಭಟ್ಕಳ. ×೧೭. ಡಾ। ಕೆ. ಎನ್. ಭಂಡಾರಿ, L. I. M. ಸೋಮವಾರ ಪೇಟೆ, ಕೊಡಗು. ೧೮. ಕೆ. ದೂಮಪ್ಪ ಕಂಕನಾಡಿ. ೧೯. ಕೆ. ಹೊನ್ನಯ್ಯ ಪುತ್ರನ್, ಹೊೖಗೆ ಬಜಾರ.—ಮ. ×೨೦. ಪಿ. ವಾಸುದೇವ ನಾಯಕ್, ಪಾಣೆಮಂಗಳೂರು. ×೨೧. ಬಿ. ಜನಾರ್ಧನ ನಾಯಕ್, ಬೋಳಾರ ಹೊಟೇಲ್, ಮ. ೨೨. ಎಚ್. ಪಾಂಡುರಂಗ ನಾಯಕ್, ವಿದ್ಯಾರ್ಥಿ—ಮ. ೨೩. ವಿ. ಎಸ್. ಪ್ರಭು, ದಿ. ವೆಸ್ಟ್ ಇಂಡಿಯಾ ಸೋಪ್ ಇಂಡಸ್ಟ್ರಿಯಲ್ಸ್ ಕೊ,—ಮ. ×೨೪. ಎನ್. ಸಣ್ಣಯ್ಯ, ಪಟೇಲ್ರು; ಸಂಪಾಜೆ-ಕೊಡಗು. ೨೫. ನರಸಿಂಹ ನಾಯ್ಕ, S/o ಎಚ್. ಜನಾರ್ಧನ ನಾಯಕ್—ಮ. +೨೬. ಕೆ. ಸೂರ್ಯನಾರಾಯಣ ರಾವ್, ಮೆಜಿಸ್ಟ್ರೇಟ್ ಕೋರ್ಟು ಬಂಟ್ವಾಳ. ೨೭. ಪದ್ಮನಾಭ ಕಾಮತ್, ಹಿಂದೂ ವಿಶ್ರಾಂತಿ ಗೃಹ, ಮುಂಬಾಯಿ. ೨೮. ಜೋನ್ ಡಿ. ಮೆಲ್ಲೊ, ಪೋರ್ಚುಗೀಸ್ ಬೇಕರಿ, ಮುಂಬಾಯಿ. ೨೯. ನಾರಾಯಣ ಪೈ ಕುಟ್‌ಕುಂಜೆಕಾರ್, ಇಂಡಿಯಾ ಗೋಲ್ಡ್ ಹೌಸ್;—ಮ. ×೩೦. ಡಿ. ದಾಮೋದರ, ಇಂಪೀರಿಯಲ್ ಬೇಂಕ್ ಆಫ್ ಇಂಡಿಯಾ, ಮ. ×೩೧. ಆರ್. ಕೆ. ಸುಬ್ಬರಾಯ, ಪೋಸ್ಟ್ ಎಂಡ್ ಸ್ಕೂಲ್ ಮಾಸ್ಟರ್, ಬಣ್ಕಲ್. ×೩೨. ಪಿ. ವಿ. ನಾಗರಾಜಶೆಟ್ಟಿ, ಹೊಳೆನರಸೀಪುರ. ೩೩. ಶ್ರೀಮತಿ ಎನ್. ಮತ್ಸ್ಯಗಂಧಿ ಬಾಯಿ, ಮ[illegible] ×೩೪. ಶ್ರೀಮತಿ ಎಸ್. ನಾಗಮ್ಮ, Primary Boy's School, ಚಾ[illegible] ಪೇಟೆ, ಮೈಸೂರು. ×೩೫. ಕೆ. ಶ್ರೀನಿವಾಸ, III Form, ಬಿ. ಎಂ. [illegible] ಸ್ಕೂಲ್, ಕಾಸರಗೋಡು. ೩೬. ವಿ. ಇಬ್ರಾಹಿಮ್, ಮಾಸ್ಟರ್ ಟೈಲರ್, [illegible] ×೩೭. ಪಿ. ಐತಪ್ಪ, ಅಧ್ಯಾಪಕ. ಪುತ್ತೂರು. ×೩೮. ಪಿ. ಬಿ. ರಾಮಣ್ಣ, [illegible] ಹೈಸ್ಕೂಲ್, ಮ. ೩೯. ಶ್ರೀಮತಿ ಕೆ. ರಾಧಾ ಬಾಯಿ ಮ. ೪೦. ರಾಮದ[illegible] ವೆಂಕಟೇಶ ಹೊಂಗನೂಕರ, ಬೆಂಗಳೂರು ಸಿಟಿ. ×೪೧. ಎ. ಶ್ಯಾಮರಾವ್, [illegible]ಸ್ವತಿ ಭವನ. ಅರಿಕೆರೆ, ಮ. ೪೨. ಕಾಪು ರಾಮ ಎ. ಕೊಟಿನ್‌ಕಾರ್, ದಿ. ಯೊಕೊ[illegible] ಸ್ಪೆಸಿ ಬೇಂಕ್, ಮುಂಬಾಯಿ. ೪೩. ಅರಕಲಗೂಡು ಎನ್. ರಾಮಣ್ಣ, [illegible] Trader's Co-op. Society Ltd. ಬೆಂಗಳೂರು ಸಿಟಿ, ೪೪. ಶಾಂತಾ[illegible] ರಾವ್, ಬಂಟ್ವಾಳ. ×೪೫. ಸಿದ್ಧಯ್ಯ ಸೆಟ್ಟಿ, ಮುದ್ರಾಡಿ ಹೆಬ್ರಿ. ×೪೬. ಎಚ್. ಎಲ್. ಕೃಷ್ಣಸ್ವಾಮಿ, ಪೋಸ್ಟ್ ಮಾಸ್ಟರ್, ಚಾಮರಾಜ ನಗರ, ಮೈಸೂರು. ×೪೭. ಪಿ. ಸಿ. ಸೆಟ್ಟಿ, ಜೈನ್—ಪಾಣೆಮಂಗಳೂರು. ೪೮. ಸೆಕ್ರೆಟರಿ, ಸ್ಟೇಶನರಿ ಸೊಸ್ಯಾಟಿ, ಅಡ್ಯನಡ್ಕ, ವಿಟ್ಲ. ೪೯. ಕೆ. ಎಸ್. ವಾಸುದೇವ ಪೈ Bd. Ele. School, ಕಾಸರಗೋಡು. ೫೦. ಆರ್. ಎ ಕೋಟಿನ್‌ಕಾರ್, ಮುಂಬಾಯಿ. ೫೧ ಪಿ. ನಾರಾಯಣ ರಾವ್, ಡ್ರಾಪರ್, ಮ. ೫೨. ಎಚ್. ಕೆ. ಕಾಮತ್, ಪುಂಜಾಲಕಟ್ಟೆ. ×೫೩. ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ. ೫೪. ಸಿ. ಕೆ. ರಾಮಕೃಷ್ಣಯ್ಯ, ಕೊಮನ್ [illegible], ಹೊಸಿಂಪುರಿ [illegible]ಕ್ಟರಿ, ಮ. ೫೫. ಶೇಷಪ್ಪ ಜೆ. ಸಿರಿಯಾನ್, ಯೊಕೋಮಾ ಸ್ಪೆಸೀ ಬೇಂಕ್ ಲಿಮಿಟೆಡ್ ಮುಂಬಾಯಿ. ×೫೬ ಪಿ. ನರಸಿಂಹ ಕಿಣಿ, ಸಿ. ಪಿ. ಸಿ. ಕಾರ್ಕಳ[illegible]೭. ಪಿ. ಪದ್ಮನಾಭ ಪ್ರಭು, ಕೆನರಾ ಹ್ಯಾಸ್ಕೂಲ್ ಬಳಿ,—ಮ. ×೫೮. ಎಂ. ರಾಮ[illegible] ಪೈ, ಗಣಪತಿ ದೇವಸ್ಥಾನ ಮಾರ್ಗ, ಮ. ೫೯. ಎ. ಪುರುಷೋತ್ತಮ ಕಾಮತ್, ಬ[illegible]. ಮ. ×೬೦ ಎಂ. ಕೃಷ್ಣಪ್ಪ, ವಿದ್ಯಾದಾಯಿನೀ ಸ್ಪೋರ್ಟ್ಸ್ ಕ್ಲಬ್, ಮುಂ[illegible]. ೬೧. ಶ್ರೀಮತಿ ಎ. ಕೂಸಮ್ಮ, ಬೋಳೂರು ಮ. ×೬೨. ಆರ್. ಎನ್. ಗ[illegible]ಪಾಲಕೃಷ್ಣ ನಾಯಕ್, ಕೊಟ್ಟಗೆಹಾರ. ×೬೩. ಹೊಮ್ಮರಡಿ ಮಲ್ಲನ ಗೌಡ, ಬಾಯಾಡಿ. ೬೪. ಶ್ರೀಮತಿ ಎಚ್. ಸರಸ್ವತಿ ದೇವಿ, ಹಸಂಪ್ರೇಮ್ಜಿ ಬಿಲ್ಡಿಂಗ್ ಮುಂಬಾಯಿ. ×೬೫. ಪೈಲೂರು ಕೃಷ್ಣಯ್ಯ, ಸುಳ್ಯ. ×೬೬. ಎ. ಜಿ. ಕೆ. ಹೆಗ್ಡೆ. ಫರಂಗಿಪೇಟೆ. ೬೭. ಆರ್. ನಾಗೇಂದ್ರ ರಾವ್, ಟೈಲರ್, ಜಗಲೂರು, ಚಿತ್ರದುರ್ಗ. ೬೮. ಕೆ. ಕೇಶವ ಭಟ್, ಜೋಡುಮಠ, ಮ. ×೬೯. ಎ. ಉಮಾ ಶಂಕರ್, ಗಣಪತಿ ಶಾಲೆ [illegible]ಮ. ×೭೦. ನಾರಾವಿ ಸರ್ವೋತ್ತಮ ಕಿಣಿ, ಟೀ ಶೋಪ್, ಕಾರ್ಕಳ. ×೭೧. ಬ್ರಹ್ಮಾನಂದ ಸೆಟ್ಟಿಗಾರ, ಲೈಬರ್ಟಿ ರೋಡ್, ಕಾರ್ಕಳ. ×೭೨ ಕೆ. ವಾಸುದೇವ ಶೆಣೈ [illegible]ಡಿ. ಮು. ಕೋರ್ಟು, ಕಾರ್ಕಳ. ×೭೩ ಎಂ. ಎಸ್. ಶ್ರೀವರ್ಮ, C/o ಭವಾನಿ ಶಂಕರ್ ರಾವ್, ಟಿ. ನರಸೀಪುರ, ×೭೪. ಎಂ. ರವಿವರ್ಮ, C/o ತಿಮ್ಮಪ್ಪ ಪೂಂಜ[illegible]ಕನಾಡಿ. ×೭೫. ಎ. ಹಮ್ಮದ್‌ಬ್ಯಾರಿ, ವಿದ್ಯಾರ್ಥಿ, ಶ್ರೀ ರಾಮಾ ಹಾ. ಎ. ಶಾಲೆ, [illegible]ರಂಗಿಪೇಟೆ. ೭೬. ಕೆ. ಉಮಾನಾಥರಾವ್, ಅಧ್ಯಾಪಕ, ಕೆನರಾ ಹೈಸ್ಕೂಲ್. ×೭೭. ಎಂ. ಬಿ. ಶೆಟ್ಟಿ, ಮುಂಬಾಯಿ. ×೭೮. ಮೋಹನದಾಸ್ ಯು. ಶೀನಪ್ಪ, ಮುಂಬಾಯಿ. ೭೯. ಎ ಸಿ. ಅಂಚನ್, ಮೋಡಿಸ್ಟ್ರೇಟ್, ಮುಂಬಾಯಿ. ೮೦. ಎನ್. ಎಸ್. ಬೋಳೂರ್, ಮ. ೮೧. ×ಕೆ. ಟಿ. ಕರ್ಕೇರ, ಮುಂಬಾಯಿ.

(*ಮ= ಮಂಗಳೂರು.) × ಈ ಗುರುತು ಇದ್ದವರು ತಮ್ಮ ಉತ್ತರಗಳನ್ನು ಬಹು ಮನೋಹರವಾಗಿ ಚಿತ್ರಿಸಿ, ತಾಳ್ಮೆ, ಕರ್ತೃತ್ವಶಕ್ತಿ, ದಕ್ಷತೆ, ಸಾಹಸ, ಜಾಗ್ರತೆ ಮತ್ತು ಕಲಾಶಕ್ತಿಗಳನ್ನು ಪ್ರದರ್ಶಿಸಿರುವರು. ೨೪, ೩೧, ೫೩, ೬೬, ನಂಬ್ರಗಳವರ ರೇಖಾಚಿತ್ರಗಳು ಅತ್ಯಂತ ಸುಂದರವಾಗಿವೆ. ಕೆಲವು ತಪ್ಪಾದ ಮತ್ತು ಸ್ಟಾಂಪು ಇಲ್ಲದ ಉತ್ತರಗಳೂ ಬಂದಿವೆ. ಅವುಗಳನ್ನು ಪ್ರಕಟಿಸಿರುವುದಿಲ್ಲ. ಒಗಟಿನ ಕುರಿತು ನಮ್ಮಿಂದ ಉತ್ತರವನ್ನಪೇಕ್ಷಿಸುವವರು ಒಂದು ಕಾರ್ಡಿನ ವೆಚ್ಚದಷ್ಟಾದರೂ ಅಂಚೆ ಚೀಟನ್ನು ರವಾನಿಸಬೇಕು.

ಸ[illegible]ಲಾಗಿ, ಪ್ರಥಮ ಬಹುಮಾನವಾದ ರಜತ ಪದಕವು ೭೩. ಶ್ರೀ [illegible]೦. ಎಸ್ [illegible]ರ್ಮ, C/o ಭವಾನಿ ಶಂಕರ್ ರಾವ್, ಟಿ. ನರಸೀಪುರ ಇವರಿಗೂ, ದ್ವಿತೀಯ [illegible]ವಾಗಿ ರೂ. ೨ ೭೯. ಶ್ರೀ. ಎ. ಸಿ. ಅಂಚನ್, ಮೋಡಿಸ್ಟ್ರೇಟ್ ಮ[illegible]ರಿಗೂ, ತೃತೀಯ ಬಹುಮಾನವಾದ ಮೂರು ಉತ್ತಮ ಕಥೆಪುಸ್ತಕಗ[illegible]. ವಿ. ನಾಗರಾಜಶೆಟ್ಟಿ, ಹೊಳೆ ನರಸೀಪುರ ಇವರಿಗೂ ದೊರೆತಿವೆ. ಕಳೆದ ಸಲದ ರಜಕ ಪದಕದ ಸ್ವೀಕಾರವನ್ನು ಮಾಡಿ, ನಮ್ಮನ್ನು ಅಭಿನಂದಿಸಿ ಪತ್ರವೊಂದು ಬಂದಿದೆ. ಶ್ರೀ. ಗೋಪಾಲಕೃಷ್ಣ ರಾಯರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳಿವೆ. ಇದೇ ರೀತಿ ವ್ಯಾಪಾರಸ್ಥರೂ, ಗ್ರಂಥಕರ್ತರೂ, ಇನ್ನಿತರರೂ ಒಗಟುಗಾರರನ್ನು ಪ್ರೋತ್ಸಾಹಿಸುವುದಕ್ಕಾಗಿಯೂ, ಕನ್ನಡ ವಾಙ್ಮಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿಯೂ ಬೆಲೆಬಾಳುವ ಒಡವೆಗಳನ್ನು ಬಹುಮಾನವಾಗಿ ಕೊಡಲು ನಮಗೆ ಕಳುಹಿಸಿ ತಮ್ಮ ವ್ಯಾಪಾರದ ಜಾಹೀರಾತನ್ನು ಮಾಡಿಕೊಳ್ಳುವರೆಂದು ಹಾರೈಸುತ್ತೇವೆ.

ಈ ಸಲದ ಒಗಟಿಗೆ

೧೬ನೇ ಪುಟವನ್ನು ನೋಡಿರಿ.

ಬಾಳಿನ ಗೋಳು.

ಲೇಖಕರು:—ಶ್ರೀ. ಗುಂಡು ರಾವ್, ... ವು.

(ಕಲ್ಪಿತ)

ನಮ್ಮಪ್ಪನಿಗೆ ನಾವು ಮೂರು ಜನ ಮಕ್ಕಳ... ಅದೂ, ನಾನೇ ಹಿರಿಯ ಮಗ. ನನಗೆ ಒಬ್ಬ ತಮ್ಮನೂ, ಒಬ್ಬ ತಂಗಿಯೂ ಇದ್ದಾರೆ. ತಮ್ಮನಿಗೀಗ ಹದಿನೈದು ವರ್ಷ, ತಂಗಿಗೆ ಹನ್ನೆರಡು ವರ್ಷ. ನಮ್ಮಪ್ಪ ಸತ್ತು ಹತ್ತು ವರ್ಷ ಆಯಿತು. ಅವನು ಜೀವವಿಮೆ ಮಾಡಿದ ಹಣವು ಮೊನ್ನೆಯ ಯುಗಾದಿಯ ವರೆಗೂ ಇದ್ದಿತು. ಈಗ... ಅದೂ ಒಂದು ಕಾಸಿಲ್ಲ. ಸಾಲದ್ದಕ್ಕೆ ಈ ವರ್ಷ ನಮ್ಮ ಕಡೆ ಬೆಳೆಯಿಲ್ಲ. ಏನೋ... ಹಾಗೂ ಹೀಗೂ, ವರ್ಷಕ್ಕಾಗುವಷ್ಟು ಧವಸವು ಬರುತ್ತಿದ್ದಿತು. ಈ ವರ್ಷ ಅದಕ್ಕೂ ಕಲ್ಲು ಬಿದ್ದಿತು. ಮನೆಯಲ್ಲಿ ಇನ್ನೆರಡು ದಿವಸಕ್ಕಾಗುವಷ್ಟು ಬತ್ತವಿದೆ. ಅದೇ ಅಕ್ಕಿಯಿಲ್ಲ. ಉಳಿದ ಸಾಮುಗ್ರಿಗಳು ನಮಗೆ ಬೇಕಾಗಿಯೇ ಇಲ್ಲ. ಬರಿಯ ...ಕ್ಕಿಯೊಂದಿದ್ದರೆ ಸಾಕು. ಅನ್ನವನ್ನು ಮಾಡಿ, ಉಪ್ಪಿನಕಾಯಿಯಲ್ಲೋ ಅಥವಾ ...ನ್ನೆಯಲ್ಲೋ ತಿಂದುಬಿಡುತ್ತೇವೆ. ನಮ್ಮ ಮನೆಗೆ ತುಪ್ಪವನ್ನು ತಂದಿದ್ದುದು ಕಳೆದ ಯುಗಾದಿಯ ಹಬ್ಬದಲ್ಲಿ. ಅಲ್ಲಿಂದೀಚೆಗೆ ನಾವು ತುಪ್ಪದ ಮುಖವನ್ನೇ ನೋಡಿಲ್ಲ. ಮೊಸರನ್ನು ವರ್ತನೇ ಹಾಕುತ್ತಿದ್ದವನು, ಬಾಕಿಯನ್ನು ಕೊಟ್ಟಲ್ಲದೆ ಹಾಕುವುದಿಲ್ಲವೆಂದು, ಹೋದ ತಿಂಗಳೇ ಮಜ್ಜಿಗೆಯನ್ನೆ ತಪ್ಪಿಸಿದನು. ಊಟದ ರುಚಿಯೇ ಇಷ್ಟಾಯಿತೆ! ಇನ್ನು ಬಟ್ಟೆಬರೆಯ ವಿಚಾರ. ನನಗಿರುವುದು ಒಂದೇ ಪಂಚೆ, ಒಂದು ಬನೀನು, ಒಂದು ವಲ್ಲಿ, ಒಂದು ಟೋಪಿ, ಇಷ್ಟೆ! ಒಂದು ಅಂಗಿಯಿಲ್ಲಾ ಸ್ವಾಮಿ, ಒಂದಂಗಿ! ನನ್ನ ತಮ್ಮನಿಗೂ ನನ್ನಂತೆಯೇ. ನನ್ನ ತಂಗಿಗೆ ಒಂದೇ ಒಂದು ಸೀರೆಯಿದ್ದಿತು. ಮೊನ್ನೆಯ ದಿವಸ, ಪಕ್ಕದ ಮನೆಯಾಕೆಯು, ಕನಿಕರಗೊಂಡು, ತನ್ನದೊಂದು ಸೀರೆಯನ್ನು ಅವಳಿಗೆ ಕೊಟ್ಟಳು. ಇನ್ನು ನಮ್ಮ ತಾಯಿಯ ವಿಚಾರ. ಅವಳಿಗೂ ಒಂದೆರಡು ಹಳೆಯ ಗುಡ್ಡೆಗಳಿವೆಯೇ ಹೊರತು, ಹೊಸದಿಲ್ಲವೇ ಇಲ್ಲ. ನಮಗೆ ಹಾಸಿಕೆ ಹೊದ್ದಿಕೆಗಳೇನೆಂದು ಕೇಳುವಿರೋ? ಸಕಲ ಚರಾಚರ ವಸ್ತುಗಳನ್ನು ಹೊತ್ತಿರುವ ಭೂದೇವಿಯೇ ನಮಗೆ ಹಾಸಿಕೆ. ಆಕಾಶರಾಯನೇ ಹೊದ್ದಿಕೆ. ಇದಿಷ್ಟೂ ಪೀಠಿಕೆ, ಸ್ವಾಮಿ, ಇನ್ನೂ ಕಥಾರಂಭವಾಗಲಿಲ್ಲ.

ಈ ವರ್ಷ ನನ್ನ ತಂಗಿಗೆ ಮದುವೆಯನ್ನು ಮಾಡಬೇಕು... ...ನವರೆಲ್ಲರು ಈಗಲೇ ನಮ್ಮನ್ನು ವಾಗ್ಬಾಣದಿಂದಿರಿಯುತ್ತಿರುವರು. ಯಾರಾ... ಹೊಟ್ಟೆ ಬಟ್ಟೆಗೆ ನೆರವಾಗುವವರನ್ನು, ಮದುವೆಮಾಡಿಕೊಳ್ಳಿರೆಂದರೆ, "ಉ... ...ರೆ. ಅವರಿಗೆ ದೊಡ್ಡ ಮನುಷ್ಯರ ಮನೆಯ ಹೆಣ್ಣು ಬೇಕಂತೆ. ನಾವು ... ...ಷ್ಟರಲ್ಲ. ಏನು ಮಾಡೋಣ? ಓದುವ ಹುಡುಗರನ್ನು ಮದುವೆಮಾಡಿಕೊಳ್ಳಿರೆಂದರೆ, ಅವರು "ಬಿ. ಎ. ಎಮ್. ಎ ಗೆ ಓದಿಸು" ಎನ್ನುತ್ತಾರೆ. ನಾವೆಲ್ಲಿ ಓದಿಸೋಣ? ಅದಿಲ್ಲದೆ ಯಾರಾದರೂ, ಬಿ. ಎ. ಎಮ್. ಎ. ಓದುವವರನ್ನು ಮಾಡಿಕೊಳ್ಳಿರೆಂದರೆ, ಸಾವಿರ—ಎರಡು ಸಾವಿರ ವರದಕ್ಷಿಣೆಯನ್ನು ಕೇಳುತ್ತಾರೆ. ನಾವೆಲ್ಲಿಂದ ತರೋಣ? ಇವರನ್ನೆಲ್ಲಾ ಬಿಟ್ಟು ಯಾವನಾದರೂ, ನನ್ನಂತಹ ದರಿದ್ರನನ್ನು "ಮದುವೆಮಾಡಿಕೊಳ್ಳಯ್ಯಾ, ಹೆಣ್ಣು ಕೊಡುತ್ತೇನೆ" ಎಂದರೆ, "ನನಗೆ ಹೊಟ್ಟೆಗಿಲ್ಲ. ಇನ್ನು ಅವಳಿಗೆಲ್ಲಿಂದ ತರಲಿ?" ಎಂದು ಕೇಳುತ್ತಾನೆ. ನಾವೇ ತಿನ್ನುವ ಹಿಟ್ಟಿಗೆ "ಲಾಟರಿ" ಹೊಡೆಯುತ್ತಿರುವಾಗ, ತಂಗಿಯ ಜೊತೆಗೆ, ಅವಳ ಗಂಡನನ್ನೂ ಹೇಗೆ ಸಾಕೋಣ? ಉಳಿದವರು ಯಾರು? ಇದು ವರೆಗಾಗಲೇ, ಒಬ್ಬಿಬ್ಬ ಹೆಂಡಿರಿಂದ ಏಟು ತಿಂದು, ಮುಂದೆ ಬರುವವಳಿಗೆ ತಾವು ಏಟು ಕೊಡಲು ಸಿದ್ಧವಾಗಿರುವ, ವೃದ್ಧ ವಿಧುರ ಶಿಖಾಮಣಿಗಳು, ಮತ್ತು ಜೀವಶ್ರಮದಂತಿರುವ ಕ್ಷಯರೋಗಿಗಳು. ಎಳೆಯ ಹುಡುಗಿಯನ್ನು, ಇಂದೋ ನಾಳೆಯೋ ಸಾಯುವ ಮುದಿಯನಿಗೊ ಅಥವಾ ಜೀವವಿದ್ದೂ ಇಲ್ಲದಂತಿರುವ ಕ್ಷಯರೋಗಿಗೋ ಕೊಡಲು ಮನಸ್ಸು ಒಪ್ಪುವುದೇ?—ಅಂತೂ ಹಾಗಾಗಿ, ಹೀಗಾಗಿ, ನನ್ನ ತಂಗಿಗೆ ಅನುರೂಪನಾದ ವರನಿಲ್ಲ!

ಈ ವರಾನ್ವೇಷಣದ ಭರದಲ್ಲಿ ಒಂದು ತಿಂಗಳ ಹಿಂದೆ ವಿಶೇಷ ಸಂಗತಿಯೊಂದು ನಡೆಯಿತು. ಮಳವಳ್ಳಿಯಲ್ಲಿ ಒಬ್ಬ ವರನಿರುವುದಾಗಿ ನನ್ನ ಸ್ನೇಹಿತನೊಬ್ಬನು ತಿಳಿಸಿದನು. ನಾನು ಅಲ್ಲಿಗೆ ಹೋದೆನು. ವರನು ವಿವಾಹವಾಗುವುದಕ್ಕೊಪ್ಪಿದನು. ಊರಿಗೆ ಬಂದು, ಯಾರು ಯಾರನ್ನೋ, "ದಮ್ಮಯ್ಯ, ಪತ್ತಯ್ಯ" ಎಂದು ಸಾಲವನ್ನು ತಂದು ಮದುವೆಯ ಸಾಮುಗ್ರಿಗಳನ್ನೆಲ್ಲಾ ಸಿದ್ಧಗೊಳಿಸಿದೆವು. ಅಷ್ಟರಲ್ಲಿಯೇ "ಕೂಡಲೇ ಹೊರಡಬೇಕೆ"ಂದು, ಮಳವಳ್ಳಿಯಿಂದ ಕಾರು ಬಂದಿತು. ನಾನು ತತ್ಕ್ಷಣವೇ ಹೋದೆನು. ವರನೇನೋ ಮದುವೆಯಾಗಲೊಪ್ಪಿದ್ದನು. ಆದರೆ ಅವನ ತಾತನು—ಸುಮಾರು ೬೫ ವರ್ಷದ ಮುದುಕ,—ಒಂದು ಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟಲ್ಲದೆ ಮದುವೆಯನ್ನು ಮಾಡಿಕೊಳ್ಳುವುದಿಲ್ಲವೆಂದನು. ನನ್ನ ಹೃದಯದಲ್ಲಿ ಬೆಂಕಿಯಿಲ್ಲದೆಯೆ ಉರಿಯೆದ್ದಿತು. ಮುದುಕನ ಕಾಲನ್ನು ಹಿಡಿದುಕೊಂಡು, ಅಂಗಲಾಚಿ ಬೇಡಿಕೊಂಡೆನು. ಅವನ ಕಲ್ಲೆದೆಯು ಕರಗಲಿಲ್ಲ. ನಿರಾಕರಿಸಿದನು. ನಾನು ಉನ್ಮತ್ತನಾಗಿ ಜಗಳಕ್ಕಾರಂಭಿಸಿದೆನು. ಸುತ್ತುಮುತ್ತಲಿನವರು ಬಂದು ಬಿಡಿಸದಿದ್ದರೆ, ಮುದುಕನಿಗೆ ಅಂದಿಗೆ ನೂರು ವರುಷಗಳು ತುಂಬುತ್ತಿದ್ದುವು. ನನಗೆ ತುರಂಗವಾಸವೋ ಅಥವಾ ಗಡಿಪಾರೋ ಆಗಿಬಿಡುತ್ತಿದ್ದಿತು. ದೇವರ ದಯದಿಂದ ಯಾವುದೂ ಸಂಭವಿಸಲಿಲ್ಲ. ಕೂಡಲೇ ಊರಿಗೆ ಬಂದುಬಿಟ್ಟೆನು. ಸಾಲವೇನೋ ಆಯಿತು. ತಂಗಿಯ ಮದುವೆಯಾಗಲಿಲ್ಲ. ಈ ವಿಚಾರವನ್ನು ತಿಳಿದವರು ನನ್ನನ್ನು ಮಾತನಾಡಿಸಲೇ ಹೆದರುವರು.

ಒಂದು ದಿವಸ ನಾನೇ ಕುಳಿತು ಯೋಚನೆಯನ್ನು ಮಾಡಿ, "ಯಾರ ಮನೆಯ ಬಚ್ಚಲನ್ನಾದರೂ ಬಳಿದರೂ ಸರಿಯೇ, ಹಣವನ್ನು ಗಳಿಸಿ ತಂಗಿಯ ಮದುವೆಯನ್ನು ಮಾಡಿ, ತಮ್ಮನನ್ನೋದಿಸಬೇಕು" ಎಂದು ಸಿದ್ಧಾಂತಮಾಡಿಕೊಂಡೆನು. ಅದರಂತೆಯೇ ಒಬ್ಬಾನೊಬ್ಬ ಆಫೀಸರಲ್ಲಿಗೆ ಹೋಗಿ, ನನಗೊಂದು ಚಾಕರಿಯನ್ನು ಮಾಡಿಸಿಕೊಡಬೇಕಾಗಿ ಕೇಳಿಕೊಂಡು, ಅವರ ಮಾತಿನ ಪ್ರಕಾರ ಅರ್ಜಿಯನ್ನು ಹಾಕಿಕೊಂಡೆನು. ಈಗ ಯಾವ ಕೆಲಸವೂ ಹಣವಿಲ್ಲದೆ ಆಗುವುದಿಲ್ಲವಲ್ಲ! ಅಧಿಕಾರಿಗಳಿಗೆ ಲಂಚವನ್ನು ಕೊಡಬೇಕಾದುದೇನೋ ಕಾಲಧರ್ಮ. ಆದರೆ ನಾನು ಲಂಚವನ್ನೆಲ್ಲಿಂದ ತಂದು ಕೊಡಲಿ? ಆ ಆಫೀಸರರು "ಈಗ ಬಾ, ಆಗ ಬಾ" ಎನ್ನುವುದರಲ್ಲಿಯೇ ಕಾಲವನ್ನು ಕಳೆದರು. ನನಗೆ ಯಾವ ಕೆಲಸವೂ ಆಗಲಿಲ್ಲ. ಮೇಲೆ ಹೇಳಿದ ಆಫೀಸರರು—ನಾನು ಲಂಚವನ್ನು ಕೊಡುವೆನೆಂಬ ಭರವಸೆಯಿಂದಲೋ ಏನೋ—ನನಗೆ ಕೆಲಸವನ್ನು ಮಾಡಿಸಿಕೊಡುವುದಾಗಿ ವಾಗ್ದಾನಮಾಡಿದ್ದರು. ಆದರೆ ತಮ್ಮ ಮಾತನ್ನು ಉಳಿಸಿಕೊಳ್ಳಲಿಲ್ಲ. ಇದರಿಂದ ಅವರೊಡನೆಯೂ ಯದ್ವಾತದ್ವಾ ಜಗಳವಾಡಿದೆನು. ...ದಲೂ ನನಗೆ ಅರ್ಧಚಂದ್ರ ಪ್ರಯೋಗವಾಯಿತು.

...ಒಂದು ದಿನ ನನ್ನ ತಮ್ಮನಿಗೆ ಅಕಸ್ಮಾತ್ತಾಗಿ ಪ್ಲೇಗು ಗೆಡ್ಡೆಯು ಕಾಣಿಸಿ...ತು. ನಾನು ಓಡಿಹೋಗಿ ಆಸ್ಪತ್ರೆಯಲ್ಲಿ ತಿಳಿಸಿದೆನು. ಬಡವರ ಮನೆಗೆ ...ವೈದ್ಯನಾರಿರುವನು.?—ಅಲ್ಲಿದ್ದ ಡಾಕ್ಟರನು ರೋಗಿಯನ್ನೇ ಕರೆದುಕೊಂಡು ...ನು. ನಾನು ಮನೆಗೆ ಬಂದು ನೋಡಿದೆನು. ನನ್ನ ತಮ್ಮನಿಗೆ ಆಸ್ಪತ್ರೆಯ ವರೆಗೆ ನಡೆದುಕೊಂಡು ಹೋಗಲು ಶಕ್ತಿಯಿರಲಿಲ್ಲ. ಗಾಡಿಯನ್ನು ಮಾಡುವುದಕ್ಕೆ ...ು ಕಾಸು ಗತಿಯಿಲ್ಲ. ಎತ್ತಿಕೊಂಡು ಹೋಗುವುದಕ್ಕೆ ಅವನು ಹದಿನೈದು ...ದವನು. ಆಸ್ಪತ್ರೆಯು ಬಹಳ ದೂರ. ಕೊನೆಗೆ ನನ್ನ ಸ್ನೇಹಿತನೊಬ್ಬನ ...ಲ್ಲನ್ನು ತೆಗೆದುಕೊಂಡು ಬಂದು, ಅದರ ಹಿಂದುಗಡೆಯಲ್ಲಿ ನನ್ನ ತಮ್ಮನನ್ನು ...ಡಿಸಿಕೊಂಡು, ಆಸ್ಪತ್ರೆಯ ದಾರಿಯನ್ನು ಹಿಡಿದೆನು. ಹೊರಟು ಬರುತ್ತಿರುವಾಗ ಚೌಕದಲ್ಲಿ ಪೋಲೀಸಿನವನು ಹಿಡಿದು ನಿಲ್ಲಿಸಿದನು. ನನಗೆ ಆತುರ! ಆತುರದಲ್ಲಿ, ಪೋಲೀಸಿನವನನ್ನು ಬೈದು ಮುಂದಕ್ಕೆ ನುಗ್ಗಿದೆನು. ಅವನು ನನ್ನ ತಮ್ಮನನ್ನು ಬೈಸ್ಕಲ್ಲಿನಿಂದ ನೂಕಿ, ಅದನ್ನೂ ಕಿತ್ತುಕೊಂಡನು. ನನಗೆ ಮಿತಿ ಮೀರಿದ ಕೋಪ ಬಂದಿತು. ಪಕ್ಕದಲ್ಲಿ ಹೋಗುತ್ತಿದ್ದ ಹಳ್ಳಿಯವನ ಲಟ್ಟವನ್ನು ಕಿತ್ತುಕೊಂಡು ಪೋಲೀಸಿನವನ ಬುರುಡೆಗೆ ಬಿಸಿನೀರನ್ನು ಕಾಸಿದೆನು. ಅವನು ರಕ್ತವನ್ನು ಕಾರಿಕೊಂಡು ಬಿದ್ದನು. ಸುತ್ತಮುತ್ತಲಿನವರು ನನ್ನನ್ನು ಪೋಲೀಸು ಠಾಣೆಗೂ ನನ್ನ ತಮ್ಮನನ್ನು ಆಸ್ಪತ್ರೆಗೂ ಸಾಗಿಸಿದರು. ಪೋಲೀಸಿನವನೇನಾದನೋ, ದೇವರೇ ಬಲ್ಲ. ನಾನೇನೋ ಮೂರು ತಿಂಗಳ ಕಾರಾಗೃಹವನ್ನನುಭವಿಸಿ ಬಂದೆನು.





ಪತ್ರಿಕಾ ಲೋಕ.



"ಜನ್ಮಿಸುವುದೂ ಸ್ತ್ರೀಯಿಂದ, ನಾಶವಾಗುವುದೂ ಸ್ತ್ರೀಯಿಂದ" ಎಂಬುದನ್ನು ನೀವು [illegible]ರಬಹುದು. ಆದರೆ ನಾನು ಹೇಳುವುದೇನೆಂದರೆ ಜನ್ಮಿಸುವುದೂ ಪತ್ರಿಕೆಗಳಿಂದ, ನಾಶವಾಗುವುದೂ ಪತ್ರಿಕೆಗಳಿಂದಲೇ. ಇದರಲ್ಲಿ ಸಾರವಿಲ್ಲವೆಂದು ಯೋಚಿಸಬೇಡಿ. ಒಂದು ಕುಟುಂಬವನ್ನು ಕುರಿತು ಒಬ್ಬ ಸ್ತ್ರೀಯ ವಿಷಯದಲ್ಲಿ ಆ ವಿಧದಲ್ಲಿ ನುಡಿದರೆ, ಒಂದು ದೇಶದವರನ್ನುಕುರಿತು ಒಂದು ಪತ್ರಿಕೆಯ ವಿಷಯದಲ್ಲಿ ಯಾಕೆ ನುಡಿಯಲಾರದು? ಇದಕ್ಕೆ ಪ್ರಪಂಚದ ತತ್ಕಾಲದ ಅಂತಸ್ಸನ್ನು ಅರಿತವರೇ ಸಾಕ್ಷಿ. ಸಮಯೋಜಿತವಾದ ನಾನಾ ವಿಧದ ರಮ್ಯವಾದ ಸಂಗತಿಗಳನ್ನು ತಿಳಿಸುವಂಥಾದ್ದು ಯಾವುದು? ಜೇನು ನೊಣಗಳಂತೆ ಕಷ್ಟಪಟ್ಟು, ಜೇನಿನಂತೆ ಮಧುರ ಸಂಗತಿಗಳನ್ನು ಸಂಗ್ರಹಿಸಿ ಬಯಲುಪಡಿಸುವಂಥಾದ್ದು ಯಾವುದು? ಜನಾಂಗದ ಕುಂದುಕೊರತೆಗಳನ್ನು ತೋರಿಸಿ, ಖಂಡಿಸಿ, ನೀಗಿಸಲೆತ್ನಿಸುವುದು ಯಾವುದು? ಜನಾಂಗದ ಏಳಿಗೆಗೆ ಅನುಕೂಲವಾದ ಉತ್ತಮ ಹಾದಿಗಳನ್ನು ತೋರಿಸುವ ಮಿತ್ರನು ಯಾರು? ಲೋಕವನ್ನೇ ಸಮಾಧಾನದಲ್ಲಿ ನೆಲೆಗೊಳಿಸುವಂಥಾದ್ದು ಅಥವಾ ಅಲ್ಲೋಲಕಲ್ಲೋಲ ಪಡಿಸುವಂಥಾದ್ದು ಯಾವುದು? **ವರ್ತಮಾನ ಪತ್ರಿಕೆಯೇ.** ಪತ್ರಿಕೆಗಳ ಮೇಲನ್ನರಿತ ಪಾಶ್ಚಾತ್ಯರು ವರ್ಷಂಪ್ರತಿ ಜಾಹಿರಾತುಗಳಿಗೆ ಮಾತ್ರ 600 ಮಿಲಿಯ ಪೌಂಡುಗಳನ್ನು ವೆಚ್ಚಮಾಡುತ್ತಾರೆ. ಬೀದಿಬೀದಿಗಳಲ್ಲಿ ತಿರುಗಿ, ಪತ್ರಿಕೆಗಳನ್ನು ಮಾರಿ ಜೀವನಮಾಡುತ್ತಿದ್ದ, ಗರೀಬನಾಗಿದ್ದ ತನ್ನ ಸ್ವಂತ ಪ್ರಯಾಸದಿಂದ 30 ಪತ್ರಿಕೆಗಳ ಪತ್ರಿಕಾಕರ್ತರಾಗಿದ್ದ, ಪತ್ರಿಕಾ ಲೋಕಕ್ಕೆ ಯಜಮಾನರೆಂದು ಕೀರ್ತಿ ಪಡೆದ "ಲೊರ್ಡ್ ನೊರ್ತಕ್ಲಿಪ್" ಎಂಬವರ ಗೌರವವನ್ನೂ, ಐಶ್ವರ್ಯವನ್ನೂ ಮಹಿಮೆಯನ್ನೂ ವರ್ಣಿಸುವುದೇ ಕಷ್ಟ. ಇಂಗ್ಲಾಂಡಿ[illegible]633ರಲ್ಲಿ ಮೊದಲನೇ ಪತ್ರಿಕೆಯು ಪ್ರಚುರಿಸಲ್ಪಟ್ಟಿತು. ಈ[illegible] ನೂರಾರು ಪತ್ರಿಕೆಗಳು ಪ್ರಚುರಿಸಲ್ಪಡುತ್ತವೆ. ಲಂಡನಿನಲ್ಲಿ 3[illegible]ರುತ್ತವೆ. 21 ಪ್ರಾತಃಕಾಲದ ದೈನಿಕ ಪತ್ರಿಕೆಗಳು, 6 ಸ[illegible]ಲದ ದೈನಿಕವು. ಇಂಗ್ಲಾಂಡ್ ಮತ್ತು ವೇಲ್ಸಿನಲ್ಲಿ 35 ಪ್ರಾತಃಕಾಲದ ಮತ್ತು 80 ಸಾಯಂಕಾಲದ ದೈನಿಕ ಪತ್ರಿಕೆಗಳು ಇವೆ. ಸ್ಕೊಟ್ಲೆಂಡಿನಲ್ಲಿ 6 ಪ್ರಾತಃಕಾಲದವು, 10 ಸಾಯಂಕಾಲದವು. ಐರ್ಲೆಂಡಿನಲ್ಲಿ 8 ಪ್ರಾತಃಕಾಲದವು, 5 ಸಾಯಂಕಾಲದವು. ಗ್ರೇಟ್ ಬ್ರಿಟನಿನ ಸಮೀಪದ ಚಿಕ್ಕ ದ್ವೀಪಗಳಲ್ಲಿ 5 ದೈನಿಕವು. ಸುಮಾರು 4½ ಕೋಟಿ ಜನಸಂಖ್ಯೆಯುಳ್ಳ ಬ್ರಿಟನ್ನಿನಲ್ಲಿ 175 ದೈನಿಕ ಪತ್ರಿಕೆಗಳಿರುತ್ತವೆ. ಕೆಲವು ಪತ್ರಿಕೆಗಳ ಚಂದಾದಾರರ ಸಂಖ್ಯೆಯನ್ನು ಗಮನಿಸಿರಿ:—"ಡೈಲಿ ಮೈಲ್" 1,817,147, "ಡೈಲಿಸ್ಕೆಚ್" 8,37,654, "ಡೈಲಿ ಎಕ್ಸ್‌ಪ್ರೆಸ್" 855 ಸಾವಿರ, "ಈವಿನಿಂಗ್ ನ್ಯೂಸ್" 8,94,568, "ಸ್ಟಾರ್" 8,02,600, "ನ್ಯೂಸ್ ಒಫ್ ದಿ ವರ್ಲ್ಡ್" 30 ಲಕ್ಷ, ಇದು ದೈನಿಕ ಪತ್ರಿಕೆಯಲ್ಲ. ಇದನ್ನು ಒಂದು ಸಲ ಪ್ರಚುರಿಸಲು 50 ಟನ್ ಕಾಗದ ಬೇಕಾಗಿರುತ್ತದೆ. 397 ಮನೆಗಳೂ 2 ಸಾವಿರ ಜನಗಳೂ ಇರುವ ಚಿಕ್ಕದೊಂದು ಗ್ರಾಮದ ಅಂಗಡಿಗಳಲ್ಲಿ ವೆಚ್ಚವಾಗುವ ಪತ್ರಿಕೆಗಳು:-ಲಂಡನ್ ದೈನಿಕ ಪತ್ರಿಕೆ 460, ಸಾಯಂಕಾಲದ್ದು 12. ವಾರದ ಪತ್ರಿಕೆ 362, ಆದಿತ್ಯವಾರದ್ದು, 453. ಮಾಸಪತ್ರಿಕೆಗಳು 517. ಈ ಮೇರೆಗೆ 1800 ಪತ್ರಿಕೆಗಳು 2 ಸಾವಿರ ಜನಗಳಿಂದ ಕೊಂಡುಕೊಳ್ಳಲ್ಪಡುತ್ತವೆ.

ಅಮೇರಿಕಾ ದೇಶದಲ್ಲಿರುವ ಪತ್ರಿಕೆಗಳು:—2441 ದೈನಿಕವು (720 ಪ್ರಾತಃಕಾಲದವು, 1721 ಸಾಯಂಕಾಲದವು)—13,660 ವಾರಪತ್ರಿಕೆಗಳು, 93 ವಾರಕ್ಕೆ ಮೂರಾವರ್ತಿಯವು, 450 ಮಾಸಕ್ಕೆ ಎರಡಾವರ್ತಿಯವು. 3517 ಮಾಸಿಕವು, 120 ಎರಡು ಮಾಸಕ್ಕೊಮ್ಮೆ, 410 ಮೂರು ಮಾಸಕ್ಕೊಮ್ಮೆ ಮತ್ತು 80 ಇತರೆ ಪತ್ರಿಕೆಗಳು. "ನ್ಯೂಯೊರ್ಕ್ ಟ್ಯಾಮ್ಸ್" ಎಂಬ ಪತ್ರಿಕೆಯನ್ನು ಪ್ರಚುರಿಸಲು ದಿನಕ್ಕೆ 30 ಸಾವಿರ ರೂಪ್ಯಾ ತಗಲಿರುತ್ತವೆ. ಓಕ್ಸ್ ಎಂಬವರು 60 ಪೌಂಡು ಸಾಲದಿಂದ ಒಂದು ಪತ್ರಿಕೆಯನ್ನು ಕೊಂಡುಕೊಂಡು, ಅದರ ಮೂಲಕ "ನ್ಯೂಯೊರ್ಕ ಟೈಮ್ಸ್" ಎಂಬುದನ್ನು ಕೊಂಡುಕೊಂಡರು. ಈಗ ಅದರಲ್ಲಿ 3019 ಕೆಲಸಗಾರರು ಗೇಯುತ್ತಾರೆ. ಅದರ ವರ್ಷದ ಉತ್ಪತ್ತಿ 54 ಮಿಲಿಯ ಪೌಂಡು! ವಾರದ ಸಂಬಳ 30,800 ಪೌಂಡು! ವರ್ಷಕ್ಕೆ 1,200,000 ಪೌಂಡು ಬೆಲೆಯುಳ್ಳ ಕಾಗದ! ದಿನಂಪ್ರತಿ 4 ಲಕ್ಷ ಪತ್ರಿಕೆಗಳು! ಆದಿತ್ಯವಾರ 7 ಲಕ್ಷ! ಅವುಗಳಿಗೆ 8 ಸಾವಿರ ನಗರಗಳಲ್ಲಿಯೂ 110 ದೇಶಗಳಲ್ಲಿಯೂ ಚಂದಾದಾರರಿರುತ್ತಾರೆ. "ಅಮೇರಿಕನ್" [illegible] ಮಾಸಿಕಕ್ಕೆ 22 ಲಕ್ಷ ಚಂದಾದಾರರಿರುತ್ತಾರೆ. ಕೆಲವು [illegible]ಮ ಲೇಖನಗಳಿಗೆ 2,400ರಿಂದ 7½ ಸಾವಿರ ರೂಪ್ಯಾ ವರೆಗೆ [illegible]ಲ್ಪಡುತ್ತವೆ. "ರಡ್ಯಾರ್ಡ್ ಕಿಪ್ಲಿಂಗ್" ಎಂಬವರಿಗೆ [illegible] ಲೇಖನಕ್ಕೆ 7½ ಸಾವಿರ ರೂಪ್ಯಾ ದೊರಕಿತು. "ಅಟ್ಲಾಂಟಿಕ್ [illegible]ತ್ಲಿ" ಎಂಬ ಮಾಸಿಕಕ್ಕೆ ಕಳುಹಿಸಲ್ಪಡುವ ಉತ್ತಮ ಲೇಖನಗಳಿಗೆ 300ರಿಂದ 1200 ರೂಪ್ಯಾ ವರೆಗೆ ಕೊಡಲ್ಪಡುತ್ತವೆ.

ಜಪಾನಿನಲ್ಲಿ ಈಗ ಸುಮಾರು 4 ಸಾವಿರ ಪತ್ರಿಕೆಗಳು [illegible] ಲಕ್ಷದಿಂದ 80 ಲಕ್ಷದ ವರೆಗಿನ ಮೂಲಧನದಿಂದ ನಡೆಸಲ್ಪಡುತ್ತವೆ. ಅಸಾಹಿ, ಒಸಾಲಿ, ಮೈನಿಚ್ಚಿ, ಜಿಜಿಸಿಂಪೊ ಮುಂತಾದವು ಪ್ರಖ್ಯಾತಿಹೊಂದಿದ ಪತ್ರಿಕೆಗಳಾಗಿರುತ್ತವೆ. ಜಪಾನಿನ ಮುಖ್ಯ ಪಟ್ಟಣದಲ್ಲಿ 21 ದೈನಿಕ ಪತ್ರಿಕೆಗಳೂ, ಒಸಾಕಾದಲ್ಲಿ ಅನೇಕ ದೈನಿಕಗಳೂ ಇರುತ್ತವೆ. ನಮ್ಮ ಇಂಡಿಯಾ ದೇಶದ ಜನಸಂಖ್ಯೆ 36 ಕೋಟಿ. ಕೆಥೊಲಿಕರು 3 ಮಿಲಿಯ 30 ಲಕ್ಷ. ಇವರಿಂದ ಆದರಿಸಲ್ಪಡುವ ಪತ್ರಿಕೆಗಳು ಎಷ್ಟು ಕಮ್ಮಿ.

ತಿರುಹೃದಯದ ದೂತ.

ಸ್ವಾಮಿ ವಿವೇಕಾನಂದರು.

When righteousness declines, O Bharata! when wickedness is strong, I rise from age to age, and take visible shape, and move a man with men, su[illegible]ouring the Good, thrusting the Evil back and setting Virtue on her seat again.

Lord Krishna.

ಧರ್ಮವೆಂಬ ನಾವೆಯು ಜನಾಂಗ ಸಾಗರದ ತರಂಗಗಳ ಆಂಧೋಲನಕ್ಕೆ ಸಿಕ್ಕಿ ಅಲ್ಲೋಲಕಲ್ಲೋಲವಾಗಬಾರದು, ಅದು ಸುಗಮವಾಗಿ ನಡೆಯಬೇಕು ಎಂಬುದೇ ಭಗವಂತನ ಉದ್ದೇಶ. ಆದರೆ ಈ “ಧರ್ಮ”ವು ಸಂಪೂರ್ಣ ಸೌಮ್ಯತೆಯಿಂದ ದಾರಿ ಹಿಡಿದುದಿಲ್ಲ. ಘೋರವಾದ ತೆರೆಗಳು ಇದನ್ನು ಬಾಧಿಸುತ್ತಾ ಇದ್ದುವು; ಒಂದು ಕಾಲದಲ್ಲಿ ಈಜಿಪ್ತಿನ ಯೆಹೂದ್ಯರ ಧರ್ಮವು ಅಧಃಪತನಕ್ಕಿಳಿಯಿತು. ಆಗ ಮೂಸಾ ಪೈಗಂಬರೆಂಬವರು ಅವತರಿಸಿದರು. ಒಂದು ಕಾಲದಲ್ಲಿ ರೋಮನರ ಧರ್ಮವು ರಸಾತಲಕ್ಕಿಳಿಯಿತು. ಆಗ ಯೇಸುಕ್ರಿಸ್ತನು ಜನಿಸಿದನು. ಅರೇಬಿಯಾದಲ್ಲೂ ಹೀಗೆ ನಡೆಯಿತು. ಹಜರತ್ ಮಹಮ್ಮದ್ ಪೈಗಂಬರರು ಜನಿಸಿದರು. ಹಿಂದೂ ಧರ್ಮವು ಪ್ರತಿ ೨೦ ವರ್ಷಗಳಿಗೊಮ್ಮೆ ಎಂಬಂತೆ ಅವನತಿಯ ದಾರಿಗೆ ಧಾವಿಸುತ್ತಿದ್ದಿತು; ಆಗ ಶ್ರೀ ರಾಮ, ಶ್ರೀ ಕೃಷ್ಣ, ಶ್ರೀ. ಶಂಕರಾಚಾರ್ಯರು, ಶ್ರೀ. ರಾಮಾನುಜಚಾರ್ಯರು, ಶ್ರೀ ಮಧ್ವಾಚಾರ್ಯರು, ಶ್ರೀ ಗೌರಾಂಗದೇವ, ಶ್ರೀ ವಲ್ಲಭಾಚಾರ್ಯ, ಶ್ರೀ ಬುದ್ಧ ದೇವ, ಶ್ರೀರಾಮಕೃಷ್ಣ ಪರಮಹಂಸ, ನಾನಕ್ ಗುರುಗೋವಿಂದ, ಕಬೀರ, ಕಮಾಲ್, ಬಸವೇಶ್ವರ ಮೊದಲಾದ ಅವತಾರಿಗಳು ಜನಿಸಿದರು.

ಸ್ವಾಮಿ ವಿವೇಕಾನಂದರು ೧೮೬೩ರಲ್ಲಿ ಕಲ್ಕತ್ತದಲ್ಲಿ ಜನಿಸಿದರು. ಅವರ ತಂದೆಯವರಾದ ವಿಶ್ವನಾಥ ದತ್ತರು ಕಲ್ಕತ್ತ ಹೈಕೋರ್ಟಿನ ಪ್ರಸಿದ್ಧ ಎಟೊರ್ನಿಗಳಾಗಿದ್ದರು. ವಿವೇಕಾನಂದರ ನಿಜವಾದ ಹೆಸರು ನರೇಂದ್ರ ಎಂದು. ನರೇಂದ್ರನು ಬಾಲ್ಯದಲ್ಲೇ ಭಕ್ತಿಭಂಡಾರಿ. ಚುರುಕು ಬುದ್ಧಿಶಾಲಿ. ಆಟದ ಗೊಂಬೆಗಳನ್ನು ದೇವರ ಮೂರ್ತಿಗಳೆಂದು ಭಾವಿಸಿ ಅವನು ಅವಕ್ಕೆ ಎರಗಿ ಧ್ಯಾನಲೋಲನಾಗುತ್ತಿದ್ದನು. ತನ್ನ ೧೫ನೇ ವರ್ಷ ಪ್ರಾಯದಲ್ಲೇ ಅವನು ಸಂಸ್ಕೃತ ಕವಿತೆಗಳನ್ನು ರಚಿಸುತ್ತಿದ್ದನು. ಅವನು ಮಹರ್ಷಿ ದೇವೇಂದ್ರನಾಥರ ಬ್ರಹ್ಮ ಸಮಾಜದಲ್ಲಿರುತ್ತಿದ್ದು, ಬಾಲ್ಯಪ್ರಾಯದಲ್ಲೇ ವೈರಾಗ್ಯಕನಸುಗಳನ್ನು ಕಾಣುತ್ತಿದ್ದನು. “ಕಾವಿಯನ್ನು ಧರಿಸಿ, ಕೈಯಲ್ಲಿ ಭಿಕ್ಷಾ ಪಾತ್ರೆಯನ್ನೆತ್ತಿ, ದೇಶಸಂಚಾರಕ್ಕೆ ಹೊರಟು, ತನ್ನ



ಸ್ವಾಮಿ ವಿವೇಕಾನಂದರು.

ನಿರ್ದಿಷ್ಟಕಾರ್ಯಗ[illegible] ವಿಜಯಿಯಾದ ಕನಸನ್ನು ಎಷ್ಟೋ [illegible] ನಾನು ಕಂ[illegible] ಎಂದು ಅವನ್ನೇ[illegible]ತ್ತಿದ್ದನು. [illegible] ಮಗನ ವೈರಾಗ್[illegible]ತ ಮನೋ[illegible] ಕಂಡು ವಿವಾಹದ [illegible]ರ್ಮಾಡನ್ನು [illegible], ನರೇಂದ್ರನು ಅದ[illegible]ಪ್ಪದೆ, ತನ್ನ ವಿವಾಹದ ಪ್ರಸ್ತಾವವು ಬಿದ್ದು ಬಿಡುವಂತೆ ಮಾಡಿದನು. ಏಕೆ? ನರೇಂದ್ರ[illegible] ಜನ್ಮಿಸಿದ ಉದ್ದೇಶ ಸಾಫಲ್ಯವು ಆಗಬೆ[illegible].

ಅಲ್ಲಿಯ ದಕ್ಷಿಣೇಶ್ವರದಲ್ಲಿ ಪ್ರಸಿದ್ಧರಾದ ಶ್ರೀರಾಮಕೃಷ್ಣ ಪರಮಹಂಸರನ್ನು ಕಂಡು ತನ್ನ ಆಧ್ಯಾತ್ಮಿಕ ವಿಚಾರ ಸಂಶಯ ನಿವಾರಣೆಯನ್ನು ಮಾಡಿಕೊಳ್ಳಬೇಕೆಂದು ನರೇಂದ್ರನಿಗೆ ಇಚ್ಛೆಯುಂಟಾಯಿತು. ಎಫ್. ಎ. ಕಲಿಯುತ್ತಿದ್ದವನಾದುದರಿಂದ ಆಂಗ್ಲ ಭಾಷಾ ಪರಿಜ್ಞಾನವು ಅವನಿಗುಂಟಾಗುತ್ತಿದ್ದಿತು. ಈಶ್ವರನ ನೆಲೆಯೇನೆಂಬುದೇ ಅವನ ಇಹದ ಹಂಬಲವಾಯಿತು. ನೆಟ್ಟನೆ ಪರಮಹಂಸರ ಬಳಿ ಸೇರಿ ಸಾಷ್ಟಾಂಗವೆರಗಿದನು. ಪರಮಹಂಸರು ತನ್ನ ಭಾವೀ ಶಿಷ್ಯನನ್ನು ತನ್ನ ಆತ್ಮಶಕ್ತಿಯ [illegible]ಾಶದಿಂದ ಹಿಡಿದಿದ್ದರೆಂದು ಯಾರಿಗೆ ಹೇಗೆ ಗೊತ್ತು? ತನ್ನ ಬಳಿಗೆ ಬಂದ ನರೇಂದ್ರನನ್ನು ಕಂಡು ರಾಮಕೃಷ್ಣರು ಸಜಲನಯರಾಗಿ ಅಪ್ಪಿಕೊಂಡರು. ಪರಮಾತ್ಮನಿಗೆ ಧನ್ಯವಾದಗಳ[illegible]ರ್ಪಿಸಿಕೊಂಡರು. ಮತ್ತು ನರೇಂದ್ರನನ್ನು ಕುರಿತು ಹೇಳಿದರು, “ಪುತ್ರಾ, ನನ್ನ ಧ್ಯಾನದ ಸಮಯದಲ್ಲಿ ನನ್ನ ಕಣ್ಣೆದುರು ಒಬ್ಬ ಯುವಕನ ಚಿತ್ರವು ಬಂದು ಯಾವಾಗಲೂ ನಿಂತು, “ಇಗೋ, ಇವನೇ ನಿನ್ನ ಶಿಷ್ಯನಾಗತಕ್ಕವನು” ಎಂದು ಎದೆತಟ್ಟಿ ಹೇಳುತ್ತಿತ್ತು. ಹಾ! ಅಂತಹ ಪರಮ ಶಿಷ್ಯನು ನೀನಲ್ಲದೆ ಮತ್ತಾರು?”

1884ರಲ್ಲಿ ನರೇಂದ್ರನ ತಂದೆಯು ತೀರಿಕೊಳ್ಳಲು, ಇಡೀ ಸಂಸಾರವು ಅಧೋಗತಿಗಿಳಿಯಿತು. ತಾಪತ್ರಯಗಳು ವಿಶೇಷವಾದಂತೆ ನರೇಂದ್ರನಲ್ಲಿ ವಿರಕ್ತಿ ಹೆಚ್ಚಿತು. ಉದರ ಭರಣಕ್ಕಾಗಿ ನರೇಂದ್ರನು ಎಲ್ಲೆಲ್ಲೂ ಕೆಲಸವನ್ನರಸಿದನು. ಆದರೆ ಅವನ ಜನ್ಮದೀಕ್ಷೆಯು ಬೇರೆಯೇ ಆಗಿತ್ತಾದುದರಿಂದ ಅವನು ಎಲ್ಲಾ ಕಡೆಗಳಲ್ಲೂ ತಿರಸ್ಕೃತನಾದನು. ನರೇಂದ್ರನು ಈ ರೀತಿಯಾಗಿ ಯಾತನೆಪಡುತ್ತಿರುವುದನ್ನು ಕಂಡು ಪರಮಹಂಸರು “ದೇವಮಂದಿರಕ್ಕೆ ತೆರಳಿ ಮಹಾ ಮಾತೆಯನ್ನು ಬೇಡಿಕೊ” ಎಂದರು. ಅಪ್ಪಣೆಯನ್ನು ಶಿರಸಾವಹಿಸಿ ನರೇಂದ್ರನು ದೇವಿಯೆದುರು [illegible] ಪ್ರಾರ್ಥಿಸಲು, ಅ[illegible] ಮಹಾ ತಾಯಿಯು ಪ್ರತ್ಯಕ್ಷಳಾಗಿ “ಮಗನೇ ವೈರಾಗ್ಯ ತಾಳು. ನನ್ನ ಚಿತ್ರವು ನಿನ್ನ ಆತ್ಮದಲ್ಲಿರಲಿ” ಎಂದು ಮಾಯವಾದಳು. ಅಂದಿ[illegible] ಮೊದಲ್ಗೊಂಡು ನರೇಂದ್ರನು ದಿವ್ಯಜ್ಞಾ[illegible]ದನು.

([illegible])

[illegible]

ಪ್ರತಿದಿನವೂ ಬೆಳಗಿನ ಜಾವಕ್ಕೆ ಎದ್ದು ಹೊರಗಿನ ಶುದ್ಧವಾದ ಗಾಳಿಯಲ್ಲಿ ಸಂಚರಿಸಬೇಕು. ಪ್ರತಿದಿನವೂ ಸ್ನಾನಮಾಡಿ ಶುಭ್ರವಾದ ಉಡುಪುಗಳನ್ನು ಧರಿಸಿಕೊಳ್ಳಬೇಕು.

ಹಾಸ್ಯವನ್ನು ಅವಸರದಿಂದ ಓದುವುದಲ್ಲ. ಅದರಲ್ಲಿನ ಶಬ್ದಾರ್ಥದಲ್ಲಡಗಿರುವ ಹಾಸ್ಯರಸವನ್ನು ಹೀರಬೇಕು.

ಬಡವರ ಬಂಧು ಹಾಸ್ಯೌಷಧಾಲಯ.

ಹಾಸ್ಯಸಂಗ್ರಹಕಾರರು ಬೇಕಾ... ಗಿದ್ದಾರೆ. ಉತ್ತಮ ಹಾಸ್ಯ... ಗಳಿಗೆ "ಸುಸ್ವಾಗತ" ವಿದೆ.

ಡಾಕ್ಟರರು:
ರೋಗ...ಲ್ಲದ ನಾಗಣ್ಣ, S. S. L. C. F. A. I. L. E. D.

ಅತೀ ಅಗ್ಗ! ಮ...ೀರೋಗಕ್ಕೆ ಕೆಳಗಿನವು ದಿವ್ಯೌಷಧ. ನಗುವವರಿಗೆ ಧರ್ಮ...

ಒಬ್ಬ ಚಿಕ್ಕ ಹುಡುಗನು ಒಂದು ಕತ್ತೆಯನ್ನು ಹೊಡೆದುಕೊಂಡು ಹೋಗುತ್ತಿದ್ದುದನ್ನು ನೋಡಿ ಇಬ್ಬರು ಸಿಪಾಯಿಗಳು ತಮಾಷೆಗಾಗಿ "ಏತಕ್ಕೋ ನಿನ್ನ ಸಹೋದರನನ್ನು ಅಷ್ಟು ಬಿ...ಯಾಗಿ ಹಿಡಿದುಕೊಂಡು ಹೋಗುತ್ತಿದ್ದಿಯೋ?"

ಹುಡುಗ:—'ಅವನು ನನ್ನಿಂದ ತಪ್ಪಿಸಿಕೊಂಡು ಸೈನ್ಯಕ್ಕೆ ಸೇರದಿರಲೆಂದು'

\+ + + +

ಅಂಗಡಿ ಯಜಮಾನ:—ಈ ಲಾಡುಗಳು ಎಂಟು ದಿನದಿಂದಲೂ ಒಂದೇ ಸಮನಾಗಿ ಖರ್ಚಾಗುತ್ತಿವೆ.

ಗಿರಾಕಿ:—'ಹಾಗಾದರೆ ನನಗೆ ಅಷ್ಟು ದಿವಸದ ಸಾಮಾನು ಬೇಕಾಗಿಲ್ಲ.

\+ + + +

ಲಕ್ಷಾಧಿಪತಿ:— "ನನ್ನ ಮಗಳನ್ನು ಮದುವೆಯಾಗಬೇಕೆ? ಅದಿನ್ನೂ ಮಗು"

ಯುವಕ:—'ನನಗೂ ಗೊತ್ತು. ಆದರೆ ಮುಂದೆ ನೂರಾರು ಜನರ ಗಲಾಟೆಯೆಂದು ಎಲ್ಲರಿಗಿಂತಲೂ ಮೊದಲೇ ಬಂದೆ"

\+ + + +

ತಂದೆ:—ರಂಗಾ, ನೀನೂ, ನಾರಾಯಣನೂ ಒಂದೇ ಕ್ಲಾಸಿನಲ್ಲಿರುವುದಲ್ಲವೇ? ನಿನಗಿಂತ ಕಲಿಯುವುದರಲ್ಲಿ ಅವನು ಜಾಣನಿದ್ದಾನೆ. ನೀನೇನು ಉಪಾಧ್ಯಾಯರು ಹೇಳಿಕೊಟ್ಟುದನ್ನು ಮರೆಯುವಿಯಾ?

ರಂಗ:—ಹೌದು. ನಾನು ಪಾಠವನ್ನು ಮರೆಯುವುದಕ್ಕೆ ಕಾರಣವಿದೆ. ಅವನ ಮನೆಯು ಶಾಲೆಯ ಹಿಂದೆಯೆ. ನನಗಾದರೊ ಇಷ್ಟು ದೂರಕ್ಕೆ ನಡೆದುಕೊಂಡು ಬರುವಾಗ ಮರೆತುಹೋಗುತ್ತದೆ.

\+ + + +

ಗುರು:—ಹುಡುಗಾ, ನೀನು ಆನೆಯನ್ನು ಕಂಡಿದ್ದಿಯೊ?

ಹುಡುಗ:—ಹೌದು ! ಎಷ್ಟೋ ನೋಡಿದ್ದೇನೆ.

ಗುರು:—ಎಲ್ಲಿ?

ಹುಡುಗ:—ನಮ್ಮಪ್ಪನ ಅಂಗಿಯ ಕಿಶೆಯೊಳಗೆ. ಸಿಗರೇಟ್ ಪೆಟ್ಟಿಗೆಯಲ್ಲಿ?

\+ + + +

ಗಿರಾಕಿ:—ಏನು ಸ್ವಾಮಿೂ? ನೀವು ನಿನ್ನೆ ಕೊಟ್ಟ ಸಕ್ಕರೆ ಗೋಣಿಯಲ್ಲಿ ಪೂರಾ ಹೊೈಗೆ ಇತ್ತು. ನೀವು ನನಗೆ ಮೋಸಮಾಡುವಿರಾ?

ಸಾಹುಕಾರ:—ಕ್ಷಮಿಸಿರಿ ರಾಯರೇ ? ನಮ್ಮ ನಾರಾಯಣ (ಕೆಲಸದವ)ನು ಮಾಡಿದ ಮೋಸ. ಅವನು ಅದಕ್ಕೆ ಸಕ್ಕರೆಯನ್ನು ಸೇರಿಸಲಿಕ್ಕೆ ಮರೆತಿರುವನೆಂದು ಕಾಣುತ್ತದೆ.

ಶ್ರೀ. ಎನ್. ಎಸ್. ಬೋಳೂರ್, ಮಂಗಳೂರು.

ಗುರು:— ಶಿಷ್ಯರನ್ನು ಕುರಿತು:—ಮನುಷ್ಯನನ್ನು ಪ್ರೀತಿಸುವ ಪ್ರಾಣಿಗಳಾವುವು?

1ನೇ ಶಿಷ್ಯ:—ನಾಯಿ ಸರ್.

2ನೇ ಶಿಷ್ಯ:—ನಾಯಿಗಿಂತ ಹುಲಿ ಹೆಚ್ಚಾಗಿ ಪ್ರೀತಿಸುತ್ತದೆ. (ಅಂದರೆ ತಿನ್ನಲಿಕ್ಕೆ.)

\+ + + +

ಗುರು:—(ಕೋಪದಿಂದ) ...ಗಾ, ನೀನು ನಿನ್ನೆ ...ಬಿಟ್ಟ ಮೇಲೆ ...ಲ್ಲಿ ಹೋದಿಯೊ?

... (ಸಂತೋಷದಿ...) ಜುಗಾರಾಡಲಿಕ್ಕೆ ...

ಗ...:—(ತಿ)ರಸ್ಕಾರದಿಂದ) ...ನಗೆ ಜುಗಾರಾಡಲಿಕ್ಕೆ ಯಾರು ಹೇಳಿದರೊ?

ರಂಗ:—(ಧೈರ್ಯದಿಂದ) ...ನ್ನೆ ನೀವಲ್ಲವೇ ಹೇಳಿದ್ದು, ಶಾಲೆ ಬಿ...ಮೇಲೆ ಏನಾದರೂ ಆಟ ಆಡಬೇಕೆಂದ...

ಗುರು:—(ತಿರಸ್ಕಾರದಿಂದ) ಜುಗಾರಾಟವೇ, ಬೇರೆ ಆಟ ಇಲ್ಲವೇ!

ರಂಗ:—(ಆನಂದದಿಂದ) ಬೇರೆ ಆಟ ಉಂಟು ಸರ್, ಆದರೆ ಇದು ಒಳ್ಳೆದು, ಯಾಕಂದರೆ ಇದರಲ್ಲಿ ದೇಹಕ್ಕೆ ದಣಿವು ಇಲ್ಲ, ಹಣವೂ ಸಿಕ್ಕುತ್ತದೆ, ಕುಳಿತಲ್ಲಿಯೆ.

ಶ್ರೀ. ಎಮ್. ವಾಸುದೇವನಾಯ್ಕ, ಜೋಡುಮಠ, ಮಂಗಳೂರು.

ಶಿಷ್ಯ:—ಹಟಯೋಗವೆಂದರೇನು ಸ್ವಾಮಿೂ.

ಅನುಭವಶಾಲಿಯಾದ ಗುರು:—ಒಂದು ಸ... ಮಾಡುವ ಕೆಲಸವನ್ನು ಎರಡಾವೃತ್ತಿ ಮಾಡು...ವುದು.

\+ + + +

ಉಪಾಧ್ಯಾಯ:—ದೇವರನ್ನು ಸ್ಮರಣೆಮಾಡೋ...ವುದು ಯಾವಾಗ?

ಶಿಷ್ಯ:—ಕಣ್ಣುಗಳು ಹೋದ ಮೇಲೆ ಸ್ವಾಮಿೂ.

ಉಪಾಧ್ಯಾಯ:—ಅದೇನೋ ಹಾಗೆ ಹೇಳ...ತ್ತಿರುವೆ?

ಶಿಷ್ಯ:—ಮಾರ್ಗದಲ್ಲಿ ಹೋಗುವಾಗ ಕಣ್ಣಿಲ್ಲ... ಕುರುಡರು ಮಾತ್ರ ಸ್ಮರಣೆಮಾಡುತ್ತಾರೆ... ಮತ್ತಾರೂ ಮಾಡುವುದು ತೋರುವುದಿಲ್ಲ ಸರ್.

ಶಿಷ್ಯ:—ಹೆಂಡತಿಯೆಂದರೆ ಯಾರು ಸರ್.

ಉಪಾಧ್ಯಾಯ:—ಯುವಕನಿಂದ ಸದಾ ಶಾಶ್ವ...ವಾಗಿ ಪ್ರೀತಿಸಲ್ಪಡಬಹುದಾದ ಯುವತಿ.

ಶ್ರೀ. ಪಿ. ಲಕ್ಷ್ಮ...

ಉಪಾಧ್ಯಾಯ:—ರಾಮಾ! ನಿನ್ನಿನ ರಾತ್ರಿಯ... ವಾಯು ಗುಣ ಹೇಗಿತ್ತು?

ರಾಮ:—ಬಹು ಉಷ್ಣವಾಗಿದೆ—ಸಾರ್!

ಉಪಾಧ್ಯಾಯ—ಛೀ! ಕತ್ತೆ! ಉಷ್ಣವೇ?

ರಾಮ:—ಕತ್ತೆಗೆ ಎರಡು ಕಂಬಳಿಗಳೂ ಸಾಕಾ...ಗಲಿಲ್ಲ!

ಶ್ರೀ. ಗೋಪಾಲಕೃಷ್ಣ ಅಡಿಗ, ಬೈಂದೂರು.

ಭಿಕ್ಷುಕ:—ಇಲ್ಲಾದರೂ ಒಂದಿಷ್ಟು ಭಿಕ್ಷೆ ಕೊಡು...ವಿರೋ, ಅಥವಾ ಆಚೆ ಊರಿನಲ್ಲಿ ಮಾಡಿದ... ಹಾಗೆ ಮಾಡಬೇಕೊ?

ಮನೆಯವ:—(ಹೆದರಿಕೆಯಿಂದ) ಆಚೆ ಊರಿನಲ್ಲಿ ಏನು ಮಾಡಿರುವೆ ಬೇಗ ಹೇಳು.

ಭಿಕ್ಷುಕ:—ಮಾಡಿದ್ದೇನು ಉಪವಾಸ.

\+ + + +

ಮಗ:—ಅಪ್ಪಾ, ನನಗಿಂದು ಮದ್ದು ಕೊಟ್ಟ ಡಾಕ್ಟರರು ಬಹಳ ಒಳ್ಳೆಯವರು.

ತಂದೆ:—ಹೇಗೆ ತಿಳಕೊಂಡೆ ಮಗೂ?

ಮಗ:—ಅವರಿಂದು ನನಗೆ ಕೊಟ್ಟ ಮದ್ದು ಬಹಳ ಸಿಹಿಯಿದೆ.

ಶ್ರೀ. ಎನ್. ಸಣ್ಣಯ್ಯ, ಪಟೇಲ, ಸಂಪಾಜೆ.

(TIT-BITS)

ಮೈಸೂರ್ ನರ್ಸಣ್ಣನ ಡೈರಿ!

ಅಯ್ಯಾ, "ಬಡವ್ರ ಬಂಧು" ಸಂಪಾದಕ್ರೆ, ಕಳ್ದ ತಿಂಗ್ಳಲ್ಲಿ ಹೊರ್ಟ್ನ ನಾನು ಹೇಂಗೂ ಉಡ್ಪಿಗೆ ಬಂದು ತಲ್ಪಿರುತ್ತೇನೆ. ನನ್ನ ಮೇಲೆ ಈಗಲೇ ಕೆಲವ್ರಿಗೆ ಕಣ್ಣಾಗಿದೆ. ಇರ್ಲಿ, ನನ್ನೀ ಡೈರಿಯಲ್ಲಿ ಕೆಲವು ಪತ್ರಗಳು ಅವೆ. ದಯುವಿಟ್ಟು ಪ್ರಕಟ್ಸಿರಿ.

ಇಂತಿ ತಮ್ಮ "ಮೈ-ನ.

ಮಹಾತ್ಮಾ ಗಾಂಧಿ ಮಹಾಮುನಿಗಳು,

ಸೆಂಟ್ರೆಲ್ ಜೈಲ್, ಪೂನಾ--ಇವ್ರಿಗೆ

ಮಹಾರಾಜಾ, ನಿಮ್ಮ ೧೯೩೩ರ ಉಪ್ವಾಸದ ಸುದ್ದಿಯಿಂದ ಉಡ್ಪಿಯವರ್‍ರು ಏನೂ ದಿಗಿಲುಗೊಂಡಂತೆ ತೋರ್‍ಲ್ವದಿಲ್ಲಾ. ಗಾಂಧಿ "ತಂಟೆಲ್ಮಾರಿ ಸರ್ಕಾರದೊಡನೆಯೂ ಸನಾತನಿಗಳೊಡನೆಯೂ ;ಪೋಕ್ರಿ ಮಾಡುತ್ತಾ ಇದ್ದಾರ. ಮುದಿ ಗೂಬೆಗೆ ಮತ್ತೇನು ಕೆಲ್ಸ?" ಎಂತ ಉಡ್ಪಿಯ ಕೆಲ ಮುಖಂಡ್ರ ದೂಷಣೆ. ಹರಿಜನ್ರ ದೇವಸ್ಥಾನ ಪ್ರವೇಶದ ಸುದ್ದಿಯೆತ್ತಿದ್ರೆ ಈಗ ಇಲ್ಲಿ ಎಲ್ರಿಗೂ ಚಳಿ ಹಿಡಿಯುತ್ತೆ, ನೀವು ಒಮ್ಮೆ ಇಲ್ಲಿಗೆ ಬಂದ್ರೆ ಲೇಸಾಗುತಿತ್ತು. ಇಲ್ಲಿಯವ್ರಿಗೆ ಪಾಠ ಕಲಿಸುತ್ತಿದ್ದರಾಗುತ್ತಿತ್ತು. ನವ ವರ್ಷದ ಸಾಷ್ಟಾಂಗ. ಇಂತಿ, ಸನಾತನಿಗಳ ವಿರೋಧಿ ವಿಧೇಯ, 'ಮೈ. ನ.'

ಮಹಾಮಾನ ಭೂಷಿತರಾದ

ಎಡ್ನೀರು ಮಠದ ಈಶ್ವರಾನಂದ ಭಾರತಿ ಸ್ವಾಮಿಗಳವ್ರಿಗೆ-

ದಿವ್ಯ ಮೂರ್ತಿಗಳೇ, ನೀವು ಸ್ವಾಮಿಗಳಾಗಿಯೂ, ಲೌಕಿಕ, ಭೌತಿಕ ವಿಚಾರ ಗಳಿಗಾಗಿ ಕೋರ್ಟಿಗೆ ನಂಬ್ರ ತರ್‍ವದೆಂದ್ರೆ ನಂಗೆ ಹೇಸಿಕೆ. "ಎಡ್ನೀರು ಮಠದ ದೇವ್ರು ನಿಮ್ಮ ಬಿನಾಮೆದಾರ, ಧರ್ಮಾಭಿವೃದ್ಧಿಯ ಕೆಲ್ಸ ನನ್ದಲ್ಲ, ಎಲ್ಲಾ ಆಸ್ತಿಪಾಸ್ತಿ ನನ್ನ ಸ್ವಂತ ದೇಹದ್ದು" ಎಂದು ನೀವಂದುದಕ್ಕೆ ಮಾನ್ಯ ಜಡ್ಜರು ನಿಮ್ಮನ್ನು ನಿಮ್ಮ ಸ್ಥಾನದಿಂದ್ಲೇ [illegible]ತ್ತೈ ಒದ್ದು ಕೆಳ್ಗಿಳಿಸಿದರಾಗುತಿತ್ತೆಂದು ಅಭಿಪ್ರಾಯಪಟ್ಟು ನಿಮ್ಗೆ ತಣ್ಣೀರು ವಿಾಯಿಸಿ ಬಿಟ್ಟಿದ್ದಾರೆ. ಹಾಂಗೆ ರಾಜಿ ಕೊಡುತ್ತೀರಾದ್ರೆ ನಂಗೆ ಹೇಳ್ಬಿಡಿ! ಹಳೇ ವರ್ಷದ ಸಲಾಂ.

ಇಂತಿ, ನಿಮ್ಮವನಾದರೆ ನಿಮ್ಮವ—ಡೊಳ್ಳು ಹೊಟ್ಟೆಯ, 'ಮೈ. ನ'

ಶ್ರೀಮತಿ ಸುಬ್ಬರಾಯನ್, ಜಮಿಾನ್ದಾರಿಣಿ, ಕುಮಾರಮಂಗಲಂ.

ಮಾತಾ, ನೀವು ದೊಡ್ಡ ಜಮಿಾನ್ದಾರಿಣಿ—ದಿವಂಗತ ಕುದ್ಮಲ ರಂಗ್ರಾಯರ ಪುತ್ರಿ ಎಂದು ನಂಗೆ ಗೊತ್ತು. ನೀವು ಮಂಗ್ಳೂರಿನ ಗವರ್ನ್ಮೆಂಟ್ ಕಾಲೇಜಿನ ವಾರ್ಷಿಕೋತ್ಸವ ದಿನಾ ದೀರ್ಘ ಭಾಷಣ ಮಾಡಿ ಸಭಿಕರ ಅನಾವಶ್ಯಕ ಅಸಡ್ಡೆಯ ಕೈಚಪ್ಪಾಳೆಗೆ ಗುರಿಯಾಗಿ ಕೊನೆ ಪಕ್ಕನೆ ಭಾಷಣವನ್ನು ನಿಲ್ಸಿದುದೂ ನಂಗೆ ಗೊತ್ತದೆ. ಲೇಡೀಸ್ ಕ್ಲಬ್ಬಿನ ತಾಮ್ರ ಜುಬಿಲಿಯ ದಿವ್ಸ ನೀವು ಮಿಸೆಸ್ ಶ್ರೇಷ್ಟರನ್ನು ಶ್ಲಾಘಿಸಿ, ಬ್ರಿಜ್—ಟೆನ್ನಿಸ್ ಬೆಡ್‌ಮಿಂಟನ್ ಆಡುವ ಮತ್ತು ಮೋಟರಿನಲ್ಲೇ ಕೂಂಡ್ರು ಆಡಿ ಓಡು[illegible] ನಿಮ್ಮಂತಹ ಸ್ತ್ರೀಯರನ್ನು ನೀವು ಹೊಗ್ಳಿದುದೂ ನಾನು ಬಲ್ಲೆ. ಈ ಕ್ಲಬ್ಬಿನ ಸುಶಿಕ್ಷಿ[illegible] ಸ್ತ್ರೀಯರಿಂದ ಸ್ವಾರ್ವಜನಿಕ ಕಾರ್ಯಗಳಾಗ್ಬೇಕಾದ್ರೆ ಈ ತರ್‍ದ ಜೀವನವು ಅಗತ್ಯವಿಲ್ಲ ಎಂದೂ, ಅದೇ ಕ್ಲಬ್ಬಿನ ಗೇಟಿನ ಒಂದು ಮೂಲೆಯಲ್ಲಿ ವಾಸಿಸುವ ಒಂದು ಬ[illegible] ಕುಟುಂಬದಂತಹ ಬಡವ್ರರನ್ನು ಸಲಹಲು ಯತ್ನಿಸಬೇಕೆಂದೂ, ಅದಲ್ಲದೆ ನಿಮ್ಮ ತಂದೆ[illegible]ರುವ್ರರಂತೆ ನೀವೂ ಆ ಸ್ತ್ರೀಯರೂ ಅಸ್ಪೃಶ್ಯತಾ ನಿವಾರಣೆಗಾಗಿ ಸಾಧಿಸ್ಬೇಕೆಂದೂ ಬೋಧಿಸಬಹುದಿತ್ತಲ್ಲಾ. ಇಲ್ಲಿಗೆ ಇನ್ನ್ಯಾವಾಗ ಸವಾರಿ? ಹೊಸ ವರ್ಷದ ನಮಸ್ತೆ.

ಕಪ್ಪಗಿನ, ಮೈ. ನಾ.

ಡಾ। ವಿಟ್ಟಲ ಶೆಟ್ರು—ಮುನ್ಸಿಪಲ್ ಚೆಯರ್‌ಮೆನ್, ಮಂಗ್ಳೂರ್–

ಖಾವಂದರವರ್‍ರೇ, ಹರಿಜನ್ರ ಉದ್ಧಾರಕ್ಕಾಗಿ ನಿಮ್ಮ ಅಧ್ಯಕ್ಷತೆಯಲ್ಲಿ ಮಂಗ್ಳೂರಿನಲ್ಲೊಂದು ಸಮಿತಿಯು ನಿರ್ಮಾಣವಾಗಿದೆಯೆಂದು ಕೇಳಿ ಅತ್ಯಾನಂದವಾಯಿತು. ಹರಿಜನರ ಬುದ್ಧಿಯು ನಿಮಗೆ ಗೊತ್ತಿಲ್ಲದಿಲ್ಲ. ನಿಮ್ಮ ಮ್ಯುನ್ಸಿಪಾಲಿಟಿಯ ಕೆಲಸಗಾರರಾದ ಹರಿಜನರು ಮುಷ್ಕರ ಹಿಡಿದುದೂ, ನೀವು ಮದ್ರಾಸಿನ 'ಹರಿಜನ'ರನ್ನು ಇಲ್ಲಿಗೆ ತರಿಸಿದುದೂ ನಿಮಗೆ ತಿಳಿದಿರಬಹುದು. ಸಿಟಿಫಾದರರಾದ ನಿಮ್ಮಂತಹ ವ್ಯಕ್ತಿಗಳು ಮಂಗ್ಳೂರಲ್ಲಿ ಬಹಳವಿದ್ದಾರೆ. ದೊಡ್ಡಸ್ತಿಕೆಯನ್ನು ಅಡಿಗೆಕೋಣೆಯಲ್ಲಿಟ್ಟು

(ಟಿಟ್-ಬಿಟ್ಸ್[illegible]

ನಿಮ್ಮೊಡನೆ ಸೇರಿಕೊಳ್ಳಲು ಪ್ರಾರ್ಥಿಸಿ[illegible] ಹರಿಜನೋದ್ಧಾರದ ಕಾರ್ಯದಲ್ಲಿ ಗಾಂಧಿ ಕೇಳಪ್ಪನವರಂತೆ ಆಗುವುದು ಬೇಡವಾದರೂ ನೀವು ಯಶಸ್ವಿಗಳಾಗಿರಿ. ಹೊಸ ಸಾಷ್ಟಾಂಗ ನಮಸ್ಕಾರ

'ಮೈ ನ' (ಪಕ್ಷಿಯಲ್ಲ.)

ಮ। ರಾ। ಶ್ರೀ[illegible] ಬಿ. ಶೆಟ್ಟಿ, ಅವರ್ಗಳ್, ಎಮ್. ಎಲ್. ಸಿ.

ಡಿ. ಬೋ. ಅಧ್ಯಕ್ಷರು, ಮಂಗಳೂರು.

ಮಹಾಶಯರೇ, ರಾಷ್ಟ್ರಸೇವಾಸಕ್ತರಾದ ನಿಮ್ಮಂತಹ ಸದ್ಗುಣಶಾಲಿಗಳು ಡಿ. ಬೋರ್ಡು ಅಧ್ಯಕ್ಷರಾದುದು, ಸಂತೋಷಜನಕ ಸಂಗತಿ. ಈಗಿನ ಕೆಲಸದ ಯಶಸ್ವಿಕತೆಗಾಗಿ ನೀವು 'ನವಯುಗದ' ಸಂಪಾದಕತ್ವವನ್ನೂ ಬಿಟ್ಟಿರೆಂದೂ ಸುದ್ದಿ. ಮರುಮಕ್ಕತ್ತಾಯ ಬೀಲಿನ ತಲೆತಿರುಕ ಬಾಣಗಳು ನಿಮ್ಮ ಮೇಲೆ ಕೆಲವೆಡೆಗಳಿಂದ ಬೀಳುತ್ತಿರುವುದು ವಿಷಾದಕರ. [illegible]ದಿರಲಿ, ಶ್ರೀಮತಿ ಕಸ್ತೂರಿ ಬಾಯಿಯವರ ಆಗಮನದ ದಿನ ಮೈದಾನಿನಲ್ಲಿ ನಿಮ್ಮ [illegible]ಧ್ಯಕ್ಷತನದಲ್ಲಿ ಜರಗಿದ ಸಭೆಯಲ್ಲಿ ಬಹಳ ಚುಟುಕು ಭಾಷಣಮಾಡಿದರಂತೆ, ಏಕೆ[illegible] ಇಂತೀ ನಮುಸ್ಕಾರ, ಸಣ್ಣ ಕಣ್ಣಿನ 'ಮೈ ನಾ'

ವಿ. ಸೂ. ಮಾಜಿ ಅಧ್ಯಕ್ಷರಿಗೂ ಸಲಾಂ ತಿಳಿಸಿಬಿಡಿ!

ಡಿಸ್ಟ್ರಿಕ್ಟ್ ಪೋಲೀಸ್[illegible]ಪರಿಂಟೆಂಡೆಂಟರಿಗೆ, ದ. ಕ. ಮಂಗಳೂರು.

ಅಯ್ಯಾ, ತಾ. ೬-[illegible]'೩೨ರ ಕಂಠೀರವದಲ್ಲಿ ಮಿ। ಜೋರ್ಜ್ ಹರ್ಬರ್ಟರು

"I feel sure our District Superintendent of Police must have noticed on the road side, beggars lying down exposing their sores and attracting attention by a continual [illegible]hideous cry which evidently they practice. It is said that in many cases the sores are imaginary and portions of the leg are so dyed as to present a hideous appearance. They are mostly from outside our District and the number of such people—really sore-ridden or otherwise, is on the increase and it is a public nuisance that ought to be stopped"

"ಎಂದರೆ, ಹೊರದೇಶದ ತಿರುಕರು ಕೈಕಾಲುಗಳ ಮೇಲೆ ಹುಣ್ಣುಗಳನ್ನು ಕಲ್ಪಿಸಿ, ವಿಕಟ ಆರ್ಭಟದಿಂದ ಅಸಹ್ಯ ದೃಶ್ಯವನ್ನುಂಟುಮಾಡ್ತಾರೆ. ಎಲ್ಲಾ ಅವ್ರ ರಂಗು—ಅವರ ಅಭ್ಯಾಸ ನಿಲ್ಸಬೇಕು" ಎಂದು ಬರೆದಿದ್ದಾರೆ. ನೋಡಿ! ಬಡವ್ರ ಮೇಲೆ ದೊಡ್ಡವ್ರ ಕಣ್ಣು!!! ಬಡವ್ರ ಬಾಯಿಗೆ ಮಣ್ಣೆರಚುವುದು! ಅಯ್ಯಾ, ಸುಪರಿಂಟೆಂಡೆಂಟರೇ, ಮಿ। ಹರ್ಬರ್ಟರ ಈ ಮಾತುಗಳನ್ನು ನೀವು ಕಿವಿಯ ಮೇಲೆ ಹಾಕಿಕೊಳ್ಳಬೇಡಿ; [illegible]ನ್ರಾದ ತಿರುಕರು ಯಾರ ಎಮ್ಮೆಯ ಕಣ್ಣೂ ತೆಗೆದಿರುವುದಿಲ್ಲ. ಕೈಯಲ್ಲಿ ಕಾಸಿಲ್ಲ[illegible]ತ್ತು ಜೀವ್ಸುವುದಕ್ಕಿಂತ ಈ ರೀತಿಭಿಕ್ಷಾಟನವು ಲೇಸು. ದಾನಿಯಾದವನು ಕೆ[illegible]ತ್ತಾನೆ; ಇಲ್ಲದಿದ್ದರೆ ಹೋಗುತ್ತಾನೆ. ಸಹಿಸಿದರೆ ನೋಟ ನೋಡುತ್ತಾನೆ. [illegible] ಕಣ್ಣು ಅತ್ತ ತಿರುಗಿಸುತ್ತಾನೆ. ಹಾಗೂ ಬಡವರು ಬದುಕಲಿ. ಇ[illegible] ಹೊಸವರ್ಷದ 'ಗುಡ್ ಬ್ಯಾ'

ಮೃದುಹೃದಯದ 'ಮೈ ನಾ'

ಬೆಂಗಳೂರು, ಮೈಸೂರುಗಳ ಎಲ್ಲಾ ಮಿತ್ರವೃಂದಕ್ಕೆ

ಮೈಸೂರು ನರ್ಸಣ್ಣನ ಸಲಾಂ.

ಬುದ್ಧಿಗಳೇ, ನಾನು ತಮ್ಮವನಾಗಿದ್ದು ಮಂಗ್ಳೂರು ಮ್ಯಾಲೆ ದಣಿಯುತ್ತಿರುವುದು ನಿಮಗೆ ಗೊತ್ತಿದೆ. ಇಲ್ಲಿ ಬಂದಾಗಿನಿಂದಲೂ ನಿಮ್ಮ ನೆನಪಾಗುತ್ತಿದೆ. ಇಲ್ಲಿ ವಿಶೇಷವೆಂದರೆ ನಮ್ಮ ಮಹಾರಾಜರ ಅರಮನೆಯಂತಹ ಒಂದು ಕಟ್ಟೋಣವೂ ಇಲ್ಲ. ಮಿ। ಶ್ರೇಷ್ಠರು ಮತ್ತು ರಾವ್ ಬಹದ್ದೂರ್ ನೆಲ್ಲಿಕ್ಯಾ ವೆಂಕಟರಾಯರ ಮನೆಗಳೂ ಅಷ್ಟು ಭವ್ಯವಾಗಿಲ್ಲ. ಹಂಪನಕಟ್ಟೆ ಬ್ರಿಟೊ ಬಿಲ್ಡಿಂಗ್ ಎಂಬುದು ಸಿಟಿಯ ಮಧ್ಯದ ಅಂಗಡಿ ಸಾಲು. ಅದರ ಗೋಡೆಗೆ ಸುಣ್ಣ ಬಳಿದು ಎಷ್ಟು ಕಾಲವಾಯಿತೋ! ಇಲ್ಲಿ ನವಯುಗದ ತತ್ವಶೋಧಕನು ನನ್ನ ಬಾಯಿಯೊಳಗೆ ಬೀಳಲಿದ್ದಾನೆ. ಅಂಗವೈಕಲ್ಯದವನೆಂದು ಅವನನ್ನು ಬಿಟ್ಟರೂ ಅವನು ಮತ್ತೂ ಮತ್ತೂ ನನ್ನ ಮೈಮೇಲೆ ಬೀಳಲಿದ್ದಾನೆ. ನನ್ನ ಉತ್ತರ ಕೊಡುವಷ್ಟು ಅವನು ಯೋಗ್ಯತೆಯುವನಲ್ಲ. ನೀವೇನೆನ್ನುವಿರಿ? ಹೊಸ ವರ್ಷದಲ್ಲಿ ಬರುತ್ತೇನೆ. ಇಂತೀ ನಿಮ್ಮ, 'ಮೈ ನಾ'

ಹಾಸ್ಯವನು
ಓದುವ...

ಜನವರಿ ಒಗಟು!

ಒಗಟುಗಾರ:—ಮುಲ್ಕಿ ಕೇಶವ ಟಿ. ದೇವಜಿ, ಮುಂಬಾಯಿ.

1	■	2		3	4		5	■	6
7			■	8		■	9		
	■	■	10				■	■	

	■
	19
■	

11	■	12		13			14	■	15
16			■			■	17		
	■	■	18				■	■	

ಮೇಲಿಂದ ಕೆಳಕ್ಕೆ:—

1. ಪಂಚಪಾಂಡವರಲ್ಲೊಬ್ಬ.
2. ಕ್ಷಾನು.
3. ಹಂದಿಗಳು.
4. ಹಲ್ಲು.
5. ಯುದ್ಧ.
6. ಧಾನ್ಯದ ರಾಶಿ (ಉಗ್ರಾಣ)
11. ವಿಷ್ಣು.
12. ಆಶೀರ್ವಾದ.
13. ಘಟ್ಟದ ಮೇಲಿನ ಡಿಸ್ಟ್ರಿಕ್ಟು
14. ಸೂರ್ಯ. [ಗಳಲ್ಲೊಂದು.
15. ತಾವರೆ.
19. ಶಂಭುಸುತ.

ಎಡದಿಂದ ಬಲಕ್ಕೆ:—

2. ಕನ್ನಡ ಮಾಸಪತ್ರಿಕೆ ಗಳಲ್ಲೊಂದು.
7. ಮಗ.
8. ಶ್ರೀ ಕೃಷ್ಣನ ಹೆಂಡತಿ.
9. ಪತಿ.
10. ಸುಡುವಿಕೆಯು.
12. ದಶಾವತಾರಗಳಲ್ಲೊಂದು.
16. ಕಿರಾತ
17. ವಿಶ್ರಾಂತಿ.
18. ಕಾಡಿನ

ಇದರ ಬಿಚ್ಚುಗರಿಗೆ ಈ ಸಲ ವೂ ಒಂದು ಬೆಳ್ಳಿಯ ಪದಕವ ಒಗಟುಗಾರರಿಂದಲೇ ಬಹುಮಾ ನವಾಗಿಡಲ್ಪಟ್ಟಿದೆ. ಅಲ್ಲದೆ 'ಜಯ ವಿಜಯ' ಕಥೆಪುಸ್ತಕವೂ ದ್ವಿತೀಯ ಬಹುಮಾನವಾಗಿ ಕೊಡಲ್ಪಡು ವುದು. ಇದರ ಉತ್ತರವು ಮಾರ್ಚಿ 15ರೊಳಗೆ ಒಂದಾಣೆ ಸ್ಟಾಂಪು ಸಮೇತ ನಮಗೆ ತಲಪತಕ್ಕದ್ದು.

ತಾ. 2ನೇ ದಿನ ಗಾಂಧಿಜೀಯವರ ಉಪವಾಸವಾಗುವುದ...

—ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರೂ ದಿವಂಗತ ಸಿ. ಆರ್. ದಾಸರ ಸಹೋದರಿ ಶ್ರೀಮತಿ ಊರ್ಮಿಳಾ ದೇವಿಯವರೂ ಕಳೆದ ತಾ. ೧೨ಕ್ಕೆ ಇಲ್ಲಿ ಬಂದಿದ್ದರು.

—ವಿದ್ಯಾರ್ಥಿಗಳು ತಮಗೆ ಬಿಡುವಿದ್ದ ವೇಳೆ ಹರಿಜನೋದ್ಧಾರ ಕೆಲಸಗಳನ್ನು ಮಾಡಬಹುದೆಂದು ಗಾಂಧಿಜೀಯವರು ಅಭಿಪ್ರಾಯಪಟ್ಟಿರುತ್ತಾರೆ.

—ಹರಿಜನೋದ್ಧಾರ ಕಾರ್ಯಕ್ಕಾಗಿ ಡಾ। ವಿಟ್ಠಲಶೆಟ್ಟಿಯವರ ಅಧ್ಯಕ್ಷತೆಯಿಂದ ಒಂದು ಸಮಿತಿಯು ಇಲ್ಲಿ ಏರ್ಪಾಡಾಗಿದೆ. ಸ್ತುತ್ಯ!

—ನಾಗಪುರದಲ್ಲಿನ ನ್ಯೂ ಇಂಗ್ಲಿಷ ಹೈಸ್ಕೂಲಿನ ಸು... ಟೆಂಡೆಂಟರು ಒಬ್ಬ ಉಪಾಧ್ಯಾಯನಿಗೆ ಹೊಡೆದುದಕ್ಕಾಗಿ ಹುಡುಗರು ಮುಷ್ಕರ ... ರು. ಒಂದು ದಿನ ರಜೆ ದೊರೆಯಿತು.

—ನಾರಾಯಣಗಂಜ್ ಎಂಬಲ್ಲೊಂದು ಶಾಲೆಯಲ್ಲಿಯ ಗ... ಚಂದ್ರದತ್ತ ಎಂಬವನು ಪರೀಕ್ಷೆಯ ಕಷ್ಟದಿಂದ ತಪ್ಪಿಸಲು ಪ್ರಾಣಹತ್ಯಮಾಡಿಕೊಂಡನು.

—ಹುಗ್ಲಿಯಲ್ಲಿ ಡಕಾಯಿತರು ಮನೆನುಗ್ಗಿದಾಗ ಯಜಮಾನಿಯು ಕಾಳಿಯ ವೇಷ ಧರಿಸಿ ಅವರನ್ನು ಭಯಪಡಿಸಿ ಓಡಿಸಿದಳು. ಇವಳು ಅಬಲೆಯೆಂದು ಹೇಗೆನ್ನಲಿ?

—ಅಲ್ಲಹಾಬಾದಿನಲ್ಲಿ ಏಳು ಮಂದಿಗಳು ಕಳೆದ ೬ ವರ್ಷಗಳಿಂದ ಕಳ್ಳ ನೋಟುಗಳನ್ನು ತಯಾರಿಸುತ್ತಿದ್ದರು, ಈಗ ಸಿಕ್ಕಿಬಿದ್ದಿರುವರು. ಸುಖ ಬಂದರೆ ಕಷ್ಟ!

—ಸೋಲಾಪುರದಲ್ಲಿ ಎರಡುಪ್ಪರಿಗೆಗಳ ಮನೆಯೊಂದು ಬಿದ್ದು ೨ ಮಂದಿಗಳು ಚಟ್ಟಣೆ. ೬ ಮಂದಿಗಳು ರೊಟ್ಟಿ!

ಕಲ್ಲಿಕೋಟೆಯ ಗುರುವಯ್ಯೂರು ಜಮೋರಿನರು ದೇವಸ್ಥಾನದ ಬಾಗಿಲನ್ನು ಇನ್ನೂ ಹರಿಜನರಿಗಾಗಿ ತೆರೆದಿಲ್ಲ. ತಾ. ೨ನೇ ದಿನ ಗಾಂಧಿಜೀಯವರ ಉಪವಾಸ ಖಂಡಿತ!

—ಜಪ್ಪುವಿನ ಸಿದ್ಧಸಮಾಜದವರು ಸ್ವಾಮಿ ಶಿವಾನಂದ ಪರಮಹಂಸರ ಜನ್ಮದಿನಾರ್ಥವಾಗಿ ೨ ಸಾವಿರ ಸ್ಪೃಶ್ಯಾಸ್ಪೃಶ್ಯರಿಗೆ ಭೋಜನ ಕೊಟ್ಟರು. ಕಲೆತು ಸಹಕರಿಸಿಪುದು ಸ್ತುತ್ಯ!

—ಮೈಸೂರು ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ತಾ. ೯ನೇ ದಿನ ಲಂಡನಿನ ರೌಂಡ್‌ಟೇಬಲಿನಿಂದ ಹಿಂದಿರುಗಲಿರುವರು. ಸಂತೋಷವೆ!

—ಚಿತ್ತಗೊಂಗಿನಲ್ಲಿ ಕ್ರಾಂತಿಯನ್ನಡಗಿಸುವುದಕ್ಕಾಗಿ ಅಲ್ಲಿಯ ಎಲ್ಲಾ ಮನೆ ಗಳವರ ಮೇಲೂ ತೆರಿಗೆ ಹಾಕಿರುವರು.

—ಮುಂಬಾಯಿಯಲ್ಲಿ ನಿರುದ್ಯೋಗಿ ಯುವಕನೊಬ್ಬನು ದುಂದುಗಾರಿಕೆಯಿಂದ ಹಣವನ್ನು ವೆಚ್ಚಮಾಡುತ್ತಿದ್ದನು. ಸಂಶಯದ ಮೇಲೆ ಮನೆ ಜಡ್ತಿ ನಡೆಸಲು ಕದ್ದ ವ್ಯಾಲುಗಳು ದೊರೆತುವು.

—ಒಬ್ಬ ರಾಜಕೀಯ ಕೈದಿಯನ್ನು ಭಂಗಿಸಿದುದಕ್ಕಾಗಿ ಅಲ್ಲಹಾಬಾದಿನಲ್ಲಿ ಸದ್ಲಿಗೆ ಎಂಬ ಪೋಲೀಸನ ಕೆಲಸವೇ ಹಾರಿಹೋಯಿತು. ಇನ್ನಾದರೂ ಬುದ್ಧಿ ಬರಲಿ!

—ದೆಹಾರಡೆನ್ ಸೆರೆಯಲ್ಲಿರುವ ಜವಾಹರಲಾಲರು ತನ್ನ ಜನ್ಮದಿನವನ್ನು ತಾನೇ ಆಚರಿಸಿದರು. ಅಲ್ಲಿಯ ಕೈದಿಗಳು ಎಲ್ಲಿಂದಲೋ ೨೪ ಹೂ ಬುಕ್ಕೆಗಳನ್ನು ಅವರಿಗೆ ಕಳುಹಿಕೊಟ್ಟರು. ಹೂ ಎಲ್ಲಿಂದ?

—ಮದ್ರಾಸಿನ ಸುರಾಜ್‌ಮಾಲ್ ಡೈಮಂಡ್ ಕಂಪೆನಿಯ ಮಹಾ ಧನಿಕ ಸುರಾಜಮಾಲರೆಂಬವರು ಹೃದ್ರೋಗದಿಂದ ಕಳೆದ ತಾ. ೧೨ರಲ್ಲಿ ತೀರಿಕೊಂಡರು.

—ತನ್ನ ಪತ್ನಿಯ ಮೇಲೆ ಕಣ್ಣಿಟ್ಟುದಕ್ಕಾಗಿ ಬೆನಾರೆಸ್‌ನಲ್ಲಿ ಭಗವತೀ ಎಂಬ ಅಳಿಯನು ಮಾವನನ್ನೇ ಕೊಂದನು.

—ಮದ್ರಾಸಿನ ಗವರ್ನಮೆಂಟ್ ಹೌಸಿನಲ್ಲಿ ೧೦೦೦ ಜನರಿಗೆ ಗವರ್ನರರು ಊಟ ಕೊಟ್ಟರು. ಚಳಿ ಭೋಜನವೇ?

—ಬಂಗಾಳದ ಜಮಾಲಪುರದಲ್ಲಿ ರಮಣಿ ಕರಂ ಎಂಬವನು ತಮ್ಮನಿಗೆ ಹೊಡೆಯುತ್ತಿದ್ದಾಗ ತಾಯಿಯು ತಡೆದುದಕ್ಕೆ ಅವಳನ್ನೇ ಕೊಂದನು. ಕೋಪವು ಪಾಪಕಂಭಕ್ಕೇರಲಿದೆ.

Reg. No. M. 2771. "ಬಡವರ ಬಂಧು" ಮಂಗಳೂರು.

Printed by V. S. Kudva at the Sharada Press, Mangalore and published by Mangalore Jarappa at the Badavara Bandhu Office, Hampankatta, Mangalore.